Sri A. BHEEMAPPA NAIK.—I am saying definitely that it is the new Government. ಬಾಕಿ ವಿಷಯ ಬೇಡ. ಜನಾಬ್ ಇಮಾಂರವರು ಒಂದು ವಿಷಯವನ್ನು ಹೇಳಿದರು. ಹೈಸ್ಕೂಲು, ಪ್ರೈಮರಿ ಸ್ಕೂಲು, ಮಿಡ್ಲ್ ಸ್ಕೂಲು ವಿದ್ಯಾಭ್ಯಾಸಕ್ಕೆ ಬೇಕಾದಷ್ಟು ಹಣ ಖರ್ಚುಮಾಡಿದ್ದೇವೆ ಎಂದು ತಿಳಿಸಿದರು. ಬಡ್ಜೆಟ್ ಮೆಮೋರ್ಯಾಂಡಂನ 28ನೇ ಪುಟದಲ್ಲಿ ನೋಡಿದರೆ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ 10 ವರ್ಷದ ವರದಿ ಇದೆ. ಹಿಂದಿದ್ದ ಸರ್ಕಾರದ ಕಾಲದಲ್ಲಿ 64 ಲಕ್ಷದಿಂದ ಪ್ರಾರಂಭವಾಗಿ 103 ಲಕ್ಷಕ್ಕೆ ನಿಂತಿದೆ. ಅಲ್ಲಿಗೆ ಅವರ ಅವಧಿ ಮುಗಿಯಿತು. ಈಗ 3 ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕೆ ಉಪಯೋಗಿಸುತ್ತಾ ಇದ್ದೇವೆ. ಅವರ 12 ವರ್ಷದ ಅವಧಿ ನಮ್ಮ ನಾಲ್ಕು ವರ್ಷದ ಅವಧಿಗೆ ಸಮಾನವಾದದ್ದು ಎಂದು ವಿನಯದಿಂದ ಹೇಳುತ್ತೇನೆ. ವಿದ್ಯಾಭ್ಯಾಸದ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಎಷ್ಟುಮಟ್ಟಿಗೆ ಮುಂದುವರಿದಿದ್ದೇವೆ ಎಂದರೆ ಒಂದೊಂದು ಹೋಬಳಿಗೆ ಒಂದೊಂದು ಹೈಸ್ಕೂಲನಂತೆ ಕೊಟ್ಟಿದ್ದೇವೆ. ಒಂದೇ ಏಕೆ ಎರಡರವರೆಗೂ ಏರಿಸಿದ್ದೇವೆ ಎಂದು ಹೆಮ್ಮೆಯಿಂದ ಹೇಳುವುದಕ್ಕೆ ಸಿದ್ಧವಾಗಿದ್ದೇನೆ.

ಆಮೇಲೆ ಜನರ ನೈತಿಕ ಮಟ್ಟದ ವಿಷಯ. ಬಡವರಿಗೆ ಕುಡಿಸಿ ಅವರ ತಲೆ ಕೆಡಿಸಿ, ಅನೇಕ ಸಂಸಾರಗಳು ಹಾಳಾಗುತ್ತಾ ಇದ್ದುದನ್ನು ತಪ್ಪಿಸಿ, ಲಕ್ಷಾಂತರ ರೂಪಾಯಿಗಳಷ್ಟು ಬರುತ್ತಾ ಇದ್ದ ವರಮಾನವನ್ನು ಲಕ್ಷಿಸದೆ ಇವತ್ತು 5 ಜಿಲ್ಲೆಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದಿದ್ದೇವೆ ದುರ್ವ್ಯಾಪಾರದಿಂದ ಬಂದ ಆ ಹಣವನ್ನು ತೆಗೆದುಕೊಂಡು ಉಪಯೋಗಿಸುವುದಕ್ಕೆ ಬದಲಾಗಿ ಸರ್ಕಾರಿ ಆಡಳಿತ ನಡೆಯದೆ ಇದ್ದರೂ ಚಿಂತೆಯಿಲ್ಲ, ಆ ಕಾರ್ಯವನ್ನು ಧೈರ್ಯವಾಗಿ ಮುನ್ನುಗ್ಗಿ ಮಾಡಿರುವುದಕ್ಕಾಗಿ ಸರ್ಕಾರದವರಿಗೆ ಎಲ್ಲರೂ ಕೂಡ ಅಭಿನಂದನೆಯನ್ನು ಅರ್ಪಿಸಲೇಬೇಕೆಂದು ಅವರಲ್ಲಿ ಅತಿ ವಿನಯದಿಂದ ಅರಿಕೆಮಾಡಿಕೊಳ್ಳುತ್ತೇನೆ.

ಇರಿಗೇಷನ್ ವರ್ಕ್ಸ್ ನಮ್ಮ ಕಾಲದಲ್ಲಿ ಆಯಿತು. 'It goes to our credit' ಎಂಬುದಾಗಿ ಅವರು.................

Janab J. MAHOMED IMAM.—The Government with which I was associated.

Sri A. BHEEMAPPA NAIK.—The Government during the time of the Hon'ble Member—I am asking that Government.

Sri K. PUTTASWAMY Mandya District—General.—That Government exists no longer.

Sri M. N. JOIS (Mysore District—General).—It is beating the dead horse.

ಶ್ರೀ ಎ. ಭೀಮಪ್ಪನಾಯಕರು.—ಇರಿಗೇಷನ್ ವರ್ಕ್ಸ್ ನಾವು ಮಾಡಿದ್ದೇವೆ ಎಂಬುದಾಗಿ ಜನಾಬ್ ಇಮಾಂರವರು ಹೇಳಿದರು. ಅವರು ಬರೀ ಕಾಗದದ ಮೇಲೆ ಮಾಡಿದರು. ನಾವು ಅದನ್ನು ಭೂಮಿಯ ಮೇಲೆ ಆಕಾರಕ್ಕೆ ತಂದು ಹೆಚ್ಚು ಬೆಳೆ ಬರುವ ಹಾಗೆ ಮಾಡುತ್ತಾ ಇದ್ದೇವೆ. ಕಾರಣಾಂತರಗಳಿಂದ ಕೆಲವು ಸ್ವಲ್ಪ ನಿಧಾನವಾಗಬಹುದು ಎಂದ ಮಾತ್ರಕ್ಕೇ ಅದನ್ನು ಸಂಪೂರ್ಣವಾಗಿ ನಿಲ್ಲಿಸುವುದಿಲ್ಲ. ಆ ಭರವಸೆಯನ್ನು ಕೊಡುತ್ತೇನೆ. ಅವತ್ತು ತಾವು ಯಾವ ನೀರಾವರಿ ಕಾರ್ಯವನ್ನು ಕೈಕೊಂಡಿದ್ದರೋ ಅದಕ್ಕಿಂತಲೂ ನೂರ್ಮಡಿ ಮಾಡಿ ಕೆಲಸವನ್ನು ಪ್ರಾರಂಭಮಾಡಿದ್ದೇವೆ. ಅವುಗಳನ್ನು ಪೂರ್ಣಗೊಳಿಸುತ್ತೇವೆ.

ಆಮೇಲೆ ವಿದ್ಯುಚ್ಛಕ್ತಿಯ ವಿಷಯ. ಹಳ್ಳಿಗಾಡುಗಳಲ್ಲಿ ಜನರು ಯಾವುದರ ಹೆಸರನ್ನು ಹೇಳುವುದಕ್ಕೂ ಬರದೆ, "ಮೂಲಿಕ್ಕಿಶೆಟ್ಟರ ದೀಪ" ಎಂದು ಹೇಳುತ್ತಿದ್ದರೋ ಅದರ ಪ್ರಯೋಜನವನ್ನು ಪ್ರತಿಯೊಂದು ಹಳ್ಳಿಯವರೂ ಇವತ್ತು ಹೊಂದುತ್ತಿದ್ದಾರೆ. ನಾಲ್ಕು ಜೊತೆ ಎತ್ತುಗಳನ್ನಿಟ್ಟುಕೊಂಡು, ಬೆಳಗಿನ ಜಾವ ನಾಲ್ಕು ಘಂಟೆಗೆ ಎದ್ದು ಬಾವಿ ಹತ್ತಿರ ನಿಂತುಕೊಂಡು, ಒಂದು ಎಕರೆಗೆ ಆಗುವಷ್ಟು ನೀರನ್ನು ಸಾಯಂಕಾಲದವರೆಗೂ ಕಷ್ಟಪಟ್ಟು ಕಪಿಲೆ ಹೊಡೆಯಬೇಕಾಗಿಲ್ಲ. ಬೆಳಿಗ್ಯೆ ಎದ್ದು ಒಂದು ಸ್ವಿಚ್ ಹಾಕಿ ದೊರೆಯ ಹಾಗೆ ಕುಳಿತುಕೊಂಡ ಹಾಗೆ ಕುಳಿತುಕೊಂಡು ನಾಲ್ಕು ಎಕರೆಗೆ ಆಗುವಷ್ಟು ನೀರನ್ನು ಹಾಯಿಸಬಹುದು. ಆ ವಿದ್ಯುಚ್ಛಕ್ತಿ ಹಳ್ಳಿಹಳ್ಳಿಗೂ ಹೋಗುವುದಲ್ಲದೆ ಹೊರದೇಶಗಳಿಗೂ ಕೂಡ ಹಂಚಿಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಅದು ಎಷ್ಟುಮಟ್ಟಿಗೆ ಆಗುತ್ತಾ ಇದೆ ಎಂಬುದನ್ನು ಅವರೇ ನೋಡಲಿ.

ಇನ್ನೊಂದು ವಿಷಯ. ಇದು ಖೋತಾ ಬಡ್ಜೆಟ್ ಎಂದು ಅವರು ಹೇಳಿದರು. ಇದನ್ನು ಅವರು ಚೆನ್ನಾಗಿ ಇನ್ನೊಂದು ಸಾರಿ ನೋಡಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ. ಯಾವುದೋ ಒಂದು ಫಂಡಿಗೆ ಕಾಂಟ್ರಿಬ್ಯೂಷನ್ ಕೊಟ್ಟು ಅದೇ ಫಂಡಿನಿಂದ ಹಣವನ್ನು ಹೆಚ್ಚು ಏಳಿಗೆಯ ಕಾರ್ಯಕ್ಕೆ ತೆಗೆದುಕೊಂಡಿದ್ದಾರೆಂದು ಅವರು ಹೇಳಿದರು. ಒಟ್ಟಿನಲ್ಲಿ ಅವರಿಗೆ ಇಷ್ಟು ಭರವಸೆಯನ್ನು ಕೊಡಬಲ್ಲೆ. ಡೆವಲಪ್‌ಮೆಂಟ್ ಫಂಡಿಗೆ ಎಷ್ಟು ಹಣ ಕಾಂಟ್ರಿಬ್ಯೂಷನ್ ಕೊಟ್ಟಿದ್ದೇವೆಯೋ ಅಷ್ಟೇ ಹಣ ನಮಗೆ ಬೇರೆ ರೀತಿಯಲ್ಲಿ ಬಂದಿದೆ. ಅದನ್ನು ಹಣಕಾಸಿನ ಸಚಿವರು ತಮ್ಮ ಮೆಮೋರ್ಯಾಂಡಂನಲ್ಲಿ ನಿರ್ದಿಷ್ಟವಾಗಿ ವಿವರಿಸಿ ಹೇಳಿದ್ದಾರೆ. ಆ ಭಾಗವನ್ನು ಅವರು ಇನ್ನೊಂದು ಸಾರಿ ಓದಬೇಕು. ಆ ವಿಷಯವಾಗಿ ಹೆಚ್ಚಿಗೆ ಹೇಳಲು ನನಗೆ ಇಷ್ಟವಿಲ್ಲ.

Mr. SPEAKER.—Hon'ble Member has got two or three minutes more.

Sri A. BHEEMAPPA NAIK.—Yes, Sir, I am finishing. ಈಗ ಕೇಂದ್ರಸರ್ಕಾರಕ್ಕೆ ಕೆಲವು ಬಾಬುಗಳು ಹೋಗುವುದರಿಂದ ನಮಗೆ 325 ಲಕ್ಷ ರೂಪಾಯಿಗಳು ಹೋಗುತ್ತವೆ ಎಂದು ಜನಾಬ್ ಇಮಾಂರವರು ಹೇಳಿದರು. ಅವರು ಇಷ್ಟು ಮಾತ್ರ ತಿಳಿದುಕೊಳ್ಳಲಿಲ್ಲ. ಯಾವ್ಯಾವ ಉದ್ಯಮವನ್ನು ಕೇಂದ್ರಕ್ಕೆ ಬಿಟ್ಟುಕೊಟ್ಟಿದ್ದೇವೆಯೋ, ಯಾವುದರ ಮೇಲೆ ಎಕ್ಸೈಜು ಡ್ಯೂಟಿ ಬರುತ್ತದೆಯೋ ಅದೆಲ್ಲಾ ಒಂದು ಕಡೆ ಒಟ್ಟುಗೂಡಿ ಇರುತ್ತದೆ. ಅದು ನಮ್ಮ ದೇಶದ ವಿಸ್ತೀರ್ಣಕ್ಕನುಗುಣವಾಗಿ ಅಥವಾ ಜನಸಂಖ್ಯೆಗನುಗುಣವಾಗಿ ಪುನಃ ವಾಪಸ್ಸು ಬರುತ್ತದೆ. ಅದಕ್ಕೆ ಧಕ್ಕೆ ಇಲ್ಲ. ಆದರೆ ಒಂದು ವಿಷಯವನ್ನು ಹೇಳಬೇಕಾಗಿದೆ ನಮ್ಮ ಸರ್ಕಾರದವರು ಸ್ವಲ್ಪ ತಪ್ಪುಮಾಡಿದ್ದಾರೆ. ಅದು ಅಷ್ಟು ದೊಡ್ಡ ತಪ್ಪು ಎಂದಲ್ಲ. ನಾವು ಇದುವರೆಗೂ ಕೋಟಿಗಟ್ಟಲೆ ರೂಪಾಯಿ ಆಹಾರ ಧಾನ್ಯಗಳಿಗಾಗಿ ಕೊಟ್ಟಿದ್ದೇವೆ. ಈ ಖರ್ಚಿನಲ್ಲಿ ಸ್ವಲ್ಪ ಭಾಗವನ್ನು ತೆಗೆದುಕೊಳ್ಳುವುದಾದರೆ ಈ ಟ್ಯಾಕ್ಸ್ ಮತ್ತು ಡ್ಯೂಟಿಬಾಬುಗಳಲ್ಲಿ ಸ್ವಲ್ಪ ಹಣವನ್ನು ಕೊಡಿ ಎಂದು ಕೇಳಿದ್ದೇವೆ. ನಾವು ಇಲ್ಲಿಯವರೆಗೂ ಅನೇಕ ತ್ಯಾಗ, ಬಲಿದಾನಗಳನ್ನು ಮಾಡಿ, ದೇಶಕ್ಕೆ ಹೆಚ್ಚಿನ ಉಪಕಾರವಾಗಿರುವುದರಿಂದ ಇದನ್ನು ಬಿಟ್ಟುಬಿಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಡಿಪ್ರೋಚಾರ್ಜ್ ಮತ್ತು ದ್ವಿದಳಧಾನ್ಯಗಳ ಮೇಲೆ ಹಾಕಿರುವ ಸೇಲ್ಸ್ ಟ್ಯಾಕ್ಸ್—ಇವೆರಡೂ ವಜಾ ಆಗಬೇಕು. ಜನಾಬ್ ಇಮಾಂರವರು ಈ ಟ್ಯಾಕ್ಸನ್ನು ತಗ್ಗಿಸಬೇಕೆಂಬ ಬಗ್ಗೆ ಏನನ್ನೂ ಹೇಳಲಿಲ್ಲ. ಏತಕ್ಕೆಂದರೆ ಅವರಿಗೆ ಯಾವಾಗಲೂ ಟ್ಯಾಕ್ಸನ್ನು ಹಾಕಿ ಹಾಕಿ ಅದೇ ಅಭ್ಯಾಸವಾಗಿದೆ. ನಮಗಾದರೋ ಯಾವಾಗಲೂ ಟ್ಯಾಕ್ಸ್ ಮತ್ತು ರೈತರ ಹೊರೆಯನ್ನು ತಗ್ಗಿಸಿ, ತಗ್ಗಿಸಿ ಎಂದು ಕೇಳುವುದು ಅಭ್ಯಾಸವಾಗಿರುತ್ತೆ. ಈ ಬಾಬಿನಿಂದ ಕಡಿಮೆಯಾಗಿರುವುದನ್ನು ಸರಿಗಟ್ಟಿಕೊಳ್ಳಲು ಬೇರೆ ಟ್ಯಾಕ್ಸ್ ಹಾಕಿದರೆ ಅದರಿಂದ ತಮಗೆ 50 ಲಕ್ಷ ರೂಪಾಯಿಗಳು ಬಂದೇ ಬರುತ್ತವೆ. ಈ ನಮ್ಮ ಕಷ್ಟಗಳನ್ನೆಲ್ಲ ಪರಿಹಾರಮಾಡಲು ತಾವು ಧೈರ್ಯವಾಗಿ ಈ ಒಟ್ಟು 25 ಲಕ್ಷ ರೂಪಾಯಿಗಳನ್ನು ದಯವಿಟ್ಟು ಬಿಡಬೇಕೆಂದು ತಿಳಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

(Sri H. M. Channabasappa rose to speak).

Sri K. PUTTASWAMY.—I have an objection. Both Sri Bheemappa Naik and Sri Channabasappa speak in the same strain. Will this be allowed?

Sri H. M. CHANNABASAPPA (Mysore District–General).—He will be very much disappointed.

Mr. SPEAKER.—I do not know in what strain he will speak. (Laughter)

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ದಿವಸ ನಮ್ಮ ಮುಂದೆ ಮಂಡಿಸಿರುವ ಆಯವ್ಯಯಪಟ್ಟಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಕೆಲವು ಮುಖ್ಯಾಂಶಗಳು ಹೊರಬೀಳುತ್ತವೆ. ಹಿಂದೆ ತಯಾರಿಸುತ್ತಿದ್ದ ಆಯವ್ಯಯಪಟ್ಟಿ, ಆಗ ಇದ್ದ ಪರಿಸ್ಥಿತಿ, ಆಗಿನ ಪ್ರಜೆಗಳ ಮನೋಭಾವ, ಈಗ ತಯಾರಿಸಿರುವ ಆಯವ್ಯಯ ಪಟ್ಟಿ, ಇಂದಿನ ಪರಿಸ್ಥಿತಿ ಮತ್ತು ಜನರ ಮನೋಭಾವ ಇವುಗಳೆಲ್ಲವನ್ನೂ ಹೋಲಿಸಿ ನೋಡಿದರೆ ಈ ವರ್ಷದ ಆಯವ್ಯಯಪಟ್ಟಿಯನ್ನು ಬಹಳ ದಕ್ಷತೆಯಿಂದ ತಯಾರಿಸಿದ್ದಾರೆಂದು ಹೇಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲ.

ಈಗ ನಮ್ಮ ಮುಂದೆ ಮಂಡಿಸಿರುವ ಬಡ್ಜೆಟ್ಟಿನಲ್ಲಿ ಯಾವ ಯಾವ ಗುಣಗಳಿರಬೇಕು, ಯಾವ ಯಾವ ಗುಣಗಳಿದ್ದರೆ ಅದು ಒಪ್ಪಿಗೆಗೆ ಅರ್ಹವಾದದ್ದು ಎಂಬುದನ್ನು ನಾವೀಗ ಒಂದೊಂದನ್ನಾಗಿ ತೆಗೆದುಕೊಂಡು ವಿಮರ್ಶಿಸೋಣ. ಒಂದು ಬಡ್ಜೆಟ್ಟನ್ನು ಪರಿಶೀಲನೆ

ಮಾಡುವಾಗ ಗಮನಿಸತಕ್ಕ ಅಂಶಗಳಲ್ಲಿ ಮುಖ್ಯವಾದದ್ದೆಂದರೆ ಆ ಬಡ್ಜೆಟ್ಟಿನಿಂದ ಜನಸಾಮಾನ್ಯರಿಗೆ ಏನು ಪ್ರಯೋಜನವಾಗುತ್ತದೆಂಬುದನ್ನು ಪರಿಶೀಲಿಸತಕ್ಕದ್ದು. ಎರಡನೆಯದಾಗಿ, ತಯಾರಿಸಿರುವ ಆಯವ್ಯಯ ಪಟ್ಟಿಯಲ್ಲಿ ಇರತಕ್ಕ ಖರ್ಚಿಗೆ ಸರಿಸಮನಾದಷ್ಟು ಆದಾಯವಿದೆಯೇ? ಉತ್ಪತ್ತಿ ಮಾರ್ಗಗಳಿಂದ ಜನಸಾಮಾನ್ಯರಿಗೆ ಎಷ್ಟರ ಮಟ್ಟಿಗೆ ಬಾಧಕಗಳುಂಟಾಗಬಹುದೆಂಬ ಅಂಶಗಳನ್ನು ನಾವು ಗಮನಿಸುವುದು ಅವಶ್ಯಕ.

ಅನೇಕ ವರ್ಷಗಳಿಂದ ನಾನೂ ಮತ್ತು ಜನಾಬ್ ಇಮಾಂರವರೂ ಶಾಸನಸಭಾಸದಸ್ಯರಾಗಿ ಕೆಲಸಮಾಡಿಕೊಂಡು ಬಂದಿದ್ದೇವೆ. ಹಿಂದೆ ಇದೇ ಜನಾಬ್ ಮಹಮದ್ ಇಮಾಂರವರು ಕೇವಲ ಒಂದು ಪ್ರೈಮರಿ ಪಾಠಶಾಲೆಯನ್ನು ಮಂಜೂರು ಮಾಡಿದ್ದಕ್ಕಾಗಿ ಅಗಿನ ಸರ್ಕಾರವನ್ನು ಎಷ್ಟರಮಟ್ಟಿಗೆ ಹೊಗಳಿದ್ದಾರೆ! ಅದು ನನಗೆ ಗೊತ್ತಿದೆ. ಆದರೆ ಈ ದಿವಸದ ಪರಿಸ್ಥಿತಿ ಏನು? ಹತ್ತೊಂಬತ್ತು ಸಾವಿರ ಪ್ರಾಥಮಿಕ ಶಾಲೆಗಳು ಇಂದು ಕೆಲಸಮಾಡುತ್ತಿವೆ. ಇದು ಎಲ್ಲರಿಗೂ ವೇದ್ಯವಾಗಿರತಕ್ಕ ವಿಷಯ.

ಶ್ರೀ ಜನಾಬ್ ಮಹಮುದ್ ಇಮಾಂರವರು.—ಅದನ್ನೆಲ್ಲಾ ನಾವೇ ಮಾಡಿಕೊಟ್ಟಿದ್ದು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅಕ್ಕಿಯ ಮೇಲೆ ಆಸೆ ನೆಂಟರಮೇಲೆ ಪ್ರೀತಿ, ಎಂಬ ನೀತಿಯನ್ನು ಅನುಸರಿಸುವುದು ಸಾಧ್ಯವಿಲ್ಲ. ಯಾವ ಸರ್ಕಾರವೇ ಆಗಲಿ, ತಾನು ಗಳಿಸಿದ ಹಣವನ್ನು ಸಾರ್ವಜನಿಕರ ಹಿತಕ್ಕೆ ಖರ್ಚು ಮಾಡಬೇಕು. ಹಣವನ್ನು ಸಂಪಾದಿಸುವುದಕ್ಕೂ ಧೈರ್ಯಬೇಕು. ಸಂಪಾದಿಸಿದ ಹಣವನ್ನು ಖರ್ಚುಮಾಡಲಿಕ್ಕೂ ಅಷ್ಟೇ ಧೈರ್ಯಬೇಕು. ಜನಾಬ್ ಇಮಾಂರವರು, ಸರ್ಕಾರದವರು ಅನೇಕ ಕೋಟಿ ರೂಪಾಯಿಗಳನ್ನು ಖರ್ಚುಮಾಡಿರುವರೆಂದು ಹೇಳಿದರು. ಈ ಹಣವನ್ನು ಯಾವ ರೀತಿ ವಿನಿಯೋಗಿಸಲಾಗಿದೆ, ಅದರಿಂದ ಜನಸಾಮಾನ್ಯರಿಗೆ ಎಷ್ಟು ಪ್ರಯೋಜನವಾಗಿದೆ, ಯಾವ ಯಾವ ಬಾಬುಗಳಲ್ಲಿ ಹಣವನ್ನು ಯಾವ ರೀತಿನೀತಿಗಳಿಗನುಸಾರವಾಗಿ ಖರ್ಚು ಮಾಡುತ್ತಿದ್ದಾರೆ, ಅದರಿಂದ ದೇಶಕ್ಕೆ ಕ್ಷೇಮವಾಗಿದೆಯೇ ಇಲ್ಲವೇ ಎಂಬುದನ್ನೆಲ್ಲಾ ಆಲೋಚನೆಮಾಡಿ ಟೀಕೆಮಾಡಿದ್ದರೆ ನಾನು ಅದನ್ನು ಸ್ವಾಗತಿಸುತ್ತಿದ್ದೆನು. ಅವರು ಹಾಗೆ ಮಾಡಿಲ್ಲ. ಈ ದಿವಸ ಮಂಡಿಸಿರುವ ಬಡ್ಜೆಟ್ ಬಹಳ ಪ್ರಗತಿದಾಯಕವಾಗಿರುತ್ತೆಂಬುದರಲ್ಲಿ ಸಂದೇಹವಿಲ್ಲ. ಇದು ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿರತಕ್ಕ ಅಂಶ. ದೇಶಾಭ್ಯುದಯಕ್ಕಾಗಿ ಖರ್ಚುಮಾಡಲು, ಬೇಕಾದಷ್ಟು ಹಣವನ್ನು ಸರ್ಕಾರದವರು ಸುಂಕ, ತೆರಿಗೆ– ಈ ರೂಪಗಳಲ್ಲೇ ಪಡೆಯಬೇಕಾದ್ದು ಸಹಜವಾಗಿದೆ. ಜನರು ತೆರಲೇ ಬೇಕಾಗಿದ್ದದ್ದೂ ಸಹಜವೇ. ಆರ್ಥಿಕ ಸಚಿವರು ತಮ್ಮ ಮನೆಯಿಂದ ತಂದುಹಾಕಿ ಕೆಲಸ ನಡೆಸಲು ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದವರು ಜನರ ಮೇಲೆ ಹಾಕುವ ತೆರಿಗೆಯ ಹೊರೆಯನ್ನು ಪ್ರಶ್ನೆ ಮಾಡುವುದು ಸರಿಯಲ್ಲ. ಆದರೆ ಹಣವನ್ನು ದುರುಪಯೋಗ ಮಾಡಿ, ದುಂದು ಖರ್ಚುಗಳಿಗೆ ಈಡು ಮಾಡಬಾರದು. ಅದರಲ್ಲಿ ಒಂದು ನೈಪುಣ್ಯತೆಯಿರಬೇಕು. ಅತ್ಯಲ್ಪ ಹಣದ ಖರ್ಚಿನಿಂದ, ಅತ್ಯಧಿಕ ಫಲವನ್ನು ಪಡೆಯುವಂತೆ ಖರ್ಚು ಮಾಡುವುದು ಜಾಣತನ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಜನರ ಆಸೆ ಆಕಾಂಕ್ಷೆಗಳು ವಿಪರೀತವಾಗಿ ಬೆಳೆದುಹೋಗಿವೆ. ಹಿಂದಿದ್ದ ಪರಿಸ್ಥಿತಿಯಲ್ಲಿ ನಮಗೆ ಹೆಚ್ಚು ಕೊಡಿ, ಎಂದು ಹೇಳುವುದೇ ಒಂದು ತಕ್ಸೀರಾಗುತ್ತಿತ್ತು. ಆದರೆ ಇಂದಿನ ಪರಿಸ್ಥಿತಿಯೇನು? ಜನರ ಆಶಾಭಾವನೆಗಳು ವೇಗವಾಗಿ ಬೆಳೆದುಕೊಂಡು ಬರುತ್ತಿವೆ. ಇಂಥಾ ಸಂದಿಗ್ಧ ಸಮಯದಲ್ಲಿ ಜನರು ಹೆಚ್ಚು ಹೆಚ್ಚು ಸೌಲಭ್ಯಗಳಿಗಾಗಿ ಒತ್ತಾಯ ಮಾಡುತ್ತಿರುವಾಗ ಸರ್ಕಾರದವರು ಧೈರ್ಯವಾಗಿ ಮುಂದೆ ಬಂದು ಸಾಧ್ಯವಾದ ಮಟ್ಟಿಗೂ ಎಲ್ಲಾ ಬಾಬಿನಲ್ಲಿಯೂ ಖರ್ಚು ಮಾಡಿ ಸಾರ್ವಜನಿಕರ ಹಿತ ಸಾಧಿಸುತ್ತಿರುವಾಗ ಅವರನ್ನು ಟೀಕಿಸುವುದರ ಬದಲು ಅವರಿಗೆ ನಾವು ಬೆಂಬಲ ಕೊಡಬೇಕಾದ್ದು ನ್ಯಾಯವಾಗಿದೆ.

ಹಣವನ್ನು ಖರ್ಚು ಮಾಡತಕ್ಕ ವಿಧಾನದಲ್ಲಿ ಮಾತ್ರ ಭಿನ್ನಾಭಿಪ್ರಾಯವಿರತಕ್ಕದ್ದು ಸಹಜವಾಗಿಯೇ ಇದೆ. ಹತ್ತಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಕಡೆ ಅಲ್ಪಸ್ವಲ್ಪ ನ್ಯೂನಾತಿರಿಕ್ತಗಳು ಇದ್ದೇ ಇರುತ್ತವೆ. ಇದು ಸ್ವಾಭಾವಿಕವಾದದ್ದು. ಅಂತಹ ನ್ಯೂನಾತಿರಿಕ್ತಗಳನ್ನು ಸರಿಪಡಿಸಲು ಯಾವ ರೀತಿನೀತಿಗಳನ್ನು ಅನುಸರಿಸಬೇಕು, ಅವುಗಳನ್ನು ಹೇಳಿ ಪರಿಹಾರ ಮಾಡಬೇಕು, ಎಂಬ ಬಗ್ಗೆ ಜನಾಬ್ ಇಮಾಂರವರು ಉತ್ತಮ ಸಲಹೆಗಳನ್ನು ಕೊಟ್ಟಿದ್ದರೆ ನಾನು ಅವರನ್ನು ವಂದಿಸುತ್ತಿದ್ದೆನು. ಆರ್ಥಿಕ ಸಚಿವರು ಜನರ ಮೇಲೆ ಹೆಚ್ಚಿನ ಮತ್ತು ಉಗ್ರವಾದ ತೆರಿಗೆಗಳನ್ನು ಹಾಕಿಲ್ಲ. ಖರ್ಚು ಬಾಬಿನಲ್ಲೇ 23½ ಲಕ್ಷ ರೂಪಾಯಿಗಳ ಖರ್ಚನ್ನು ಜೋತಾ ಮಾಡಿದ್ದಾರೆ. ಇದನ್ನೂ ಸದಸ್ಯರು ಗಮನಿಸಬೇಕು. ಇದರ ಜೊತೆಗೆ ಸಣ್ಣಪುಟ್ಟ ಹೊಸ ತೆರಿಗೆ ಬಾಬಿನಿಂದ ಸರ್ಕಾರಕ್ಕೆ 38 ಲಕ್ಷ ರೂಪಾಯಿಗಳು ಬರುವಂಥಾ ಒಂದು ಮಾರ್ಗವನ್ನು ಸಹ ಸೂಚಿಸಿದ್ದಾರೆ:—

(1) ರಿಜಿಸ್ಟ್ರೇಷನ್ ಫೀಜಿನ ಬಾಬ್ತು—ಒಂದು ಲಕ್ಷ ರೂಪಾಯಿಗಳು.

(2) ವಿದ್ಯುಚ್ಛಕ್ತಿಯ ಬಾಬ್ತು—ಐದು ಲಕ್ಷ ರೂಪಾಯಿಗಳು.

(3) ಜೂಜಿನ ತೆರಿಗೆಯ ಬಾಬ್ತು—ಏಳು ಲಕ್ಷ ರೂಪಾಯಿಗಳು.

(4) ದ್ವಿದಳ ಧಾನ್ಯಗಳ ಬಾಬ್ತು—ಐದು ಲಕ್ಷ ರೂಪಾಯಿಗಳು.

(5) ಡಿಪೋಗಳ ಬಾಬ್ತು—ಇಪ್ಪತ್ತು ಲಕ್ಷ ರೂಪಾಯಿಗಳು. ಈ ಐದು ಬಾಬುಗಳಿಂದ ಹೊಸ ಸಂಪಾದನೆಗೆ ಮಾರ್ಗಮಾಡಿದ್ದಾರೆ. ಮೊದಲನೆಯ ಮೂರು ಬಾಬಿನಲ್ಲಿ ಅಂದರೆ ರಿಜಿಸ್ಟ್ರೇಷನ್, ಎಲೆಕ್ಟ್ರಿಸಿಟಿ ಮತ್ತು ಬೆಟ್ಟಿಂಗ್ ಟ್ಯಾಕ್ಸ್ ತೆರಿಗೆ ವಿಧಿಸಿರುವುದರಿಂದ ಸಾಮಾನ್ಯ ಜನರಿಗೇನೂ ಹೆಚ್ಚಿನ ತೊಂದರೆ ಆಗುವುದಿಲ್ಲ. ಆದರೆ ಕೊನೆಯ ಎರಡು ಬಾಬುಗಳಾದ ದ್ವಿದಳ ಧಾನ್ಯಗಳ ಮೇಲಣ ತೆರಿಗೆ ಮತ್ತು ಡಿಪೋ ತೆರಿಗೆಗಳ ಬಗ್ಗೆ ನಾನು ನನ್ನ ಖಚಿತವಾದ ವಿರೋಧ ಅಭಿಪ್ರಾಯವನ್ನು ಕೊಡಬೇಕಾಗಿದೆ. ತಾವು ಈ ಬಾಬುಗಳ ಮೇಲೆ ಸುಂಕವನ್ನು ವಿಧಿಸುವಾಗ ಏನು ಹೇಳಿರುತ್ತೀರೆಂಬುದನ್ನು ನೋಡಿ ದ್ವಿದಳ ಧಾನ್ಯದ ತೆರಿಗೆಯಿಂದ ರೈತರಿಗೂ, ವ್ಯವಸಾಯಗಾರರಿಗೂ, ಮತ್ತು ವ್ಯಾಪಾರಗಾರರಿಗೂ ಏನೂ ತೊಂದರೆಯಾಗುವುದಿಲ್ಲ. ಈ ಸುಂಕವೆಲ್ಲ ಕೊಂಡುಕೊಳ್ಳತಕ್ಕವರ ಮೇಲೆ ಬೀಳುತ್ತದೆ ಎಂಬುದಾಗಿ ಹೇಳಿದ್ದೀರಿ. ಡಿಪೋಗಳ ತೆರಿಗೆಯಿಂದ ಗ್ರಾಮಾಂತರ ವಾಸಿಗಳಿಗೆ ಯಾವ ತೊಂದರೆಯೂ ಆಗದೆ, ಕೇವಲ ನಗರವಾಸಿಗಳಿಗೆ ಮಾತ್ರ ಇದರ ಬಿಸಿ ತಾಗುವುದಾಗಿ, ಹೇಳಿದ್ದೀರಿ. ಆದರೆ ಈ ಎರಡು ಬಾಬುಗಳಿಂದ ತಮಗೆ ಬರುವುದು ಕೇವಲ ಸುಮಾರು 25 ಲಕ್ಷ ರೂಪಾಯಿಗಳು, ಆದರೆ ಇದನ್ನು ವಜಾ ಮಾಡಿದರೆ ಸರ್ಕಾರಕ್ಕೆ ಅಷ್ಟು ಹಣ ಕಡಿಮೆಯಾಗುತ್ತದೆಂದು ಭಾವಿಸಿದ್ದೀರಿ. ಸರ್ಕಾರದವರಿಗೆ ಈ ಸಂ

ಬಂಧವಾಗಿ ಅರಿಕೆ ಮಾಡಿಕೊಳ್ಳುವುದಿಷ್ಟೆ. ಜನರ ಮೇಲೆ ಬೇರೆ ತೆರಿಗೆಯನ್ನು ವಿಧಿಸಲು ಸಾಧ್ಯವೇ ಇಲ್ಲವೆಂದು ಸರ್ಕಾರದವರಿಗೆ ಕಂಡುಬಂದಾಗ ಮಾತ್ರವೇ ಇಂಥಾ ತೆರಿಗೆಗಳನ್ನು ಹೊರಿಸಬೇಕೇ ಶಿವಾಯಿ ಸಾಧಾರಣ ಸಂದರ್ಭಗಳಲ್ಲಿ .ಇದನ್ನು ಖಂಡಿತ ಹಾಕಬಾರದು. ಬೇರೆ ಮಾರ್ಗದಲ್ಲಿ ಹಣವನ್ನು ಸಂಪಾದಿಸಬಹುದೆಂಬ ಬಗ್ಗೆ ನಾನು ತಮಗೆ ಕೆಲವು ಸಲಹೆಗಳನ್ನು ನೀಡಬೇಕೆಂದಿದ್ದೇನೆ. ಆ ಮಾರ್ಗದಲ್ಲಿ ತಾವು ಇದಕ್ಕಿಂತ ಹೆಚ್ಚು ಹಣವನ್ನು ಪಡೆಯಬಹುದು.

ಬಸ್ ಸರ್ವಿಸ್ ಲೈಸೆನ್ಸ್‌ಗಳನ್ನು ಮುಫತ್ತಾಗಿ ಕೊಡುವ ಬದಲು ಹರಾಜು ಮಾಡಿದರೆ ಏನಿಲ್ಲವೆಂದರೂ 25 ಲಕ್ಷ ರೂಪಾಯಿಗಳು ಬರುತ್ತವೆ. ಹಾಗೆಯೇ ಮೈಸೂರು ಬೆಂಗಳೂರುಗಳಲ್ಲಿರುವ ಈ ದೊಡ್ಡದೊಡ್ಡ ಹೋಟಲುಗಳನ್ನು ನಡೆಸುವ ಹಕ್ಕನ್ನು ಹರಾಜು ಮಾಡಿದರೆ ಲಕ್ಷಾಂತರ ರೂಪಾಯಿಗಳು ಬರುವ ಅವಕಾಶವಿರುತ್ತದೆ. ಹಣ ಉತ್ಪತ್ತಿ ಮಾಡಲು ಈ ವಿಧಾನಗಳಲ್ಲಿ ಯಾವುದಾದರೂ ಅನುಸರಿಸಬಹುದು. ಈಗ ಅಕ್ಕಿ, ರಾಗಿ ಮುಂತಾದ ದವಸಧಾನ್ಯಗಳನ್ನು ಕಮ್ಮಿ ದರದಲ್ಲಿ ಮಾರುವುದರಿಂದ ಸಾರ್ವಜನಿಕರಿಗೆ ಸೇರಿದ ಲಕ್ಷಾಂತರ ರೂಪಾಯಿಗಳನ್ನು ಕೇವಲ ಕೆಲವರ ಉಪಯೋಗಕ್ಕಾಗಿ ಖರ್ಚು ಮಾಡುತ್ತಿದ್ದೀರಿ. ನೀವು ದವಸವನ್ನು ಮಾರತಕ್ಕ ಬೆಲೆಯಲ್ಲಿ ಒಂದು ರೂಪಾಯಿಗೆ ಒಂದು ಪಾವಿನಷ್ಟು ಕಡಿಮೆ ಮಾಡಿದರೂ ಸಾಕು, ತಮಗೆ ಲಕ್ಷಾಂತರ ರೂಪಾಯಿಗಳು ಬರುತ್ತವೆ. ಈ ರೀತಿ ಅನೇಕ ಸಲಹೆಗಳನ್ನು ಕೊಡಬಹುದು. ಇಂತಹ ಅವಕಾಶಗಳು ಬೇಕಾದಷ್ಟು ಇರುವಾಗ ಜನರಿಗೆ ನೋವನ್ನುಂಟುಮಾಡುವ ರೀತಿಯಲ್ಲಿ ತೆರಿಗೆಗಳನ್ನು ವಿಧಿಸುವುದು ಸೂಕ್ತವಲ್ಲ. ಈ ಎರಡು ತೆರಿಗೆಗಳನ್ನೂ ಸರ್ಕಾರದವರು ಹಾಕಲೇ ಕೂಡದೆಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತೇನೆ. ಬೇರಿನ್ನಾವ ದಾರಿಯೂ ಇಲ್ಲವೆಂದು ತೋರಿಸಿಕೊಟ್ಟರೆ ಆಗ ಮಾತ್ರ ಈ ತೆರಿಗೆಗಳನ್ನು ವಿಧಿಸಬಹುದೆಂದು ಒಪ್ಪುತ್ತೇನೆ.

ಇಂದಿನ ಆಯವ್ಯಯದ ವಿಷಯದಲ್ಲಿ ಟೀಕೆ ಮಾಡುವುದು ಅಷ್ಟಾಗಿ ಅನಾವಶ್ಯಕವೆಂದು ನಾನು ಅಭಿಪ್ರಾಯ ಪಡುತ್ತೇನೆ. ಮಾನ್ಯ ಮಿತ್ರರೊಬ್ಬರು ಆಯವ್ಯಯ ಪಟ್ಟಿಯು ಯಾವ ವಿಧದಲ್ಲೂ ಆಶಾಜನಕವಾಗಿಲ್ಲವೆಂದು ಹೇಳಿದರು. ಈ ವರ್ಷ ವಿದ್ಯಾಭ್ಯಾಸದ ಬಾಬಿನಲ್ಲಿ ಪ್ರೈಮರಿ ಸ್ಕೂಲು, ಮಾಧ್ಯಮಿಕ ಸ್ಕೂಲು, ಇತ್ಯಾದಿ ಕಾರ್ಯಗಳಿಗೆ ಹೆಚ್ಚು ಹಣ ಒದಗಿಸಿಲ್ಲವೆಂದು ಸೂಚಿಸಿದರು. ಒಂದು ವಿಷಯ ಹೇಳುವುದಾದರೆ, ಈ ಎರಡು ಮೂರು ವರ್ಷಗಳಲ್ಲಿ ಜನರ ಆಸೆ ಆಕಾಂಕ್ಷೆಗಳನ್ನು ಈಡೇರಿಸುವುದಕ್ಕಾಗಿ ಕೇಳಿ ಕೇಳಿದಹಾಗೆ ಹೈಸ್ಕೂಲು, ಮಿಡ್ಲ್ ಸ್ಕೂಲುಗಳನ್ನು ಮಂಜೂರು ಮಾಡಿದ್ದಾರೆ. ಅವುಗಳನ್ನೀಗ ಸಂಘಟನೆ ಮಾಡುವುದಕ್ಕೆ ಕೆಲವುಕಾಲ ಬೇಕು. ಇವುಗಳನ್ನು ಸಮರ್ಪಕವಾಗಿ ಸಂಘಟನೆ ಮಾಡದೆ ಇದ್ದ ಹಾಗೆಯೇ ಬಿಟ್ಟು ಮುಂದೆ ಹೋಗುವುದು ಕಾರ್ಯನೀತಿಯಲ್ಲ. ಇದೇ ಈ ವರ್ಷ ಹೆಚ್ಚಿಗೆ ಹಣ ಕೊಡದಿರುವುದಕ್ಕೆ ಕಾರಣ. ಇದುವರೆಗೆ ನಾವು ಕೈಗೊಂಡಿರುವ ಕಾರ್ಯಗಳ ಸಂಘಟನೆ ಮಾಡುವ ಸ್ಥಿತಿಯಲ್ಲಿ ನಾವಿದ್ದೇವೆ. ಸಂಘಟನೆ ಮಾಡಿ ಕೈಗೊಂಡ ಯೋಜನೆಗಳನ್ನು ಒಂದು ಹತೋಟಿಗೆ ತೆಗೆದುಕೊಂಡು ಅವುಗಳ ಪ್ರಯೋಜನವನ್ನು ಸಂಪೂರ್ಣವಾಗಿ ಜನರಿಗೆ ಒದಗುವಂತೆ ಮಾಡಿದ ಮೇಲೆ ನಾವು ಮುಂದಕ್ಕೆ ಹೋಗುವುದು ಸೂಕ್ತ. ಜನಾಬ್ ಇಮಾಂರವರು ಹೇಳಿದಂತೆ ಸುಮ್ಮನೆ ಮುಂದುವರಿಸಿಕೊಂಡು ಹೋಗುವುದು ಜಾಣ್ಮೆಯಲ್ಲವೆಂದು ಹೇಳುತ್ತೇನೆ.

ಆಡಳಿತದ ವಿಷಯದಲ್ಲಿ ಒಂದೆರಡು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಬಡ್ಜೆಟ್ಟಿನಲ್ಲಿ ಸರ್ಕಾರದವರು ಒದಗಿಸಿರುವ 12 ಕೋಟಿ ರೂಪಾಯಿಗಳಿಂದ ಅತ್ಯಧಿಕ ಪ್ರಮಾಣದಲ್ಲಿ ಜನರಿಗೆ ಪ್ರಯೋಜನವಾಗುತ್ತದೆಯೋ ಎಂಬುದನ್ನು ನಾವು ಮುಖ್ಯವಾಗಿ ನೋಡಿಕೊಳ್ಳಬೇಕು. ಈ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ಎಚ್ಚರಿಕೆಯಿಂದ ಕೆಲಸ ಮಾಡಬೇಕು. ಅನೇಕ ಬಾಬುಗಳಲ್ಲಿ ತಾವು ಅನವಶ್ಯಕವಾಗಿ ಖರ್ಚು ಮಾಡುತ್ತಿದ್ದೀರಿ. ಅವನ್ನು ಖೋತಾ ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಪ್ರಶ್ನೋತ್ತರಗಳ ಕಾಲದಲ್ಲಿ ವೈಸ್-ಛಾನ್ಸಲರ್ ರವರ ನೇಮಕದ ವಿಷಯದಲ್ಲಿ ಬಂದ ಪ್ರಶ್ನೆಗಳ ಸುರಿಮಳೆಯನ್ನು ನೋಡಿದರೆ, ಆ ವಿಷಯದಲ್ಲಿ ಪ್ರಜೆಗಳ ಅಭಿಪ್ರಾಯವೇನಿದೆಯೆಂಬುದು ವ್ಯಕ್ತವಾಗುತ್ತದೆ. ತಾವು ಇದಕ್ಕಾಗಿ ಮಾಡಿರುವ ಖರ್ಚು ಜನಸಾಮಾನ್ಯಕ್ಕೆ ಅಷ್ಟು ಪ್ರಯೋಜನಕಾರಿಯಲ್ಲವೆಂಬ ಅಂಶವನ್ನು ತೋರ್ಪಡಿಸಿದ್ದಾರೆ. ಅದನ್ನು ಮನಗಂಡು ಸರ್ಕಾರದವರು ಮುಂದಿನ ಕಾರ್ಯಕ್ರಮ ಕೈಕೊಳ್ಳುವ ಏರ್ಪಾಡು ಮಾಡಬೇಕು.

Mr. SPEAKER.—Five minutes more.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಮತ್ತೊಂದು ವಿಷಯವನ್ನು ಬಹಳ ಪಶ್ಚಾತ್ತಾಪದಿಂದ ಹೇಳಬೇಕಾಗಿದೆ. ಅದು ಕೃಷ್ಣರಾಜಸಾಗರ ವರ್ಕ್ಸ್‌ಗೆ ಸಂಬಂಧಪಟ್ಟ ವಿಷಯ. ಪಬ್ಲಿಕ್ ವರ್ಕ್ಸ್ ಸಚಿವರು ಈಗ ಸಭೆಯಲ್ಲಿಲ್ಲ. ಇದ್ದರೆ ಉತ್ತಮವಾಗಿತ್ತು. ಕೃಷ್ಣರಾಜಸಾಗರದಿಂದ ನಮಗೆ ವಾಸ್ತವವಾಗಿ ಬರತಕ್ಕ ಉತ್ಪತ್ತಿಯೇನು, ನಾವು ಮಾಡುತ್ತಿರುವ ಖರ್ಚೇನು ಎಂಬುದನ್ನು ಸ್ವಲ್ಪ ನೋಡಲಿ. ಕೃಷ್ಣರಾಜ ಸಾಗರದಂಥ ಒಂದು ದೊಡ್ಡ ಉದ್ಯಮದಿಂದ ನಮಗೆ ಬರುತ್ತಿರುವುದು ಕೇವಲ 29,500 ರೂಪಾಯಿಗಳು ಮಾತ್ರ, ನಾವು ಖರ್ಚು ಮಾಡುತ್ತಿರುವುದು ಸುಮಾರು ಏಳು ಲಕ್ಷ ರೂಪಾಯಿಗಳು. ಈ ಬಗ್ಗೆ ಅಂಕಿ ಅಂಶಗಳನ್ನು ಸ್ವಲ್ಪ ನೋಡಿ. 1948-49ರಲ್ಲಿ 7,25,000 ರೂಪಾಯಿಗಳ ಉತ್ಪತ್ತಿಗೆ, 6,68,000 ರೂಪಾಯಿಗಳು ಖರ್ಚಾಗಿದೆ. ಈ ಪ್ರಕಾರ ಖರ್ಚು ಕಳೆದು ಕೈಗೆ ಬಂದಿರುವುದು 29,000 ರೂಪಾಯಿಗಳು ಮಾತ್ರ. ಇದಕ್ಕಾಗಿ ಇಷ್ಟೊಂದು ದೊಡ್ಡ ಸಿಬ್ಬಂದಿಯನ್ನು ನಡೆಸಿಕೊಂಡು ಹೋಗುವುದು ಸರಿಯೇ? ವಿಶ್ವೇಶ್ವರಯ್ಯ ನಾಲಾ ಕೆಳಗೆ ಎಷ್ಟು ಬಾಕಿಯಿದೆಯೆಂಬುದನ್ನು ನೋಡಿ. ಬಹಳ ವ್ಯಾಕುಲವಾಗುತ್ತದೆ. ಏಕರೇಜ್ ಕಂಟ್ರಿಬ್ಯೂಷರ್ ಮತ್ತು ನೀರು ಸರ[illegible]ಯಿಂದ 1948-49ರಲ್ಲಿ 50 ಲಕ್ಷ ರೂಪಾಯಿಗಳ ಮೇಲ್ಪಟ್ಟು ಬಾಕಿ ಬರಬೇಕಾಗಿತ್ತು. ಇದರಲ್ಲಿ ವಸೂಲ ಆಗಿರುವುದು ಕೇವಲ $4\frac{1}{2}$ ಲಕ್ಷ ರೂಪಾಯಿಗಳು. ಏಕರೇಜ್ ಕಂಟ್ರಿಬ್ಯೂಷರ್ 29 ಲಕ್ಷ ಚಿಲ್ಲರೆಯಷ್ಟು ರೂಪಾಯಿಗಳು ವಸೂಲಾಗಬೇಕಾಗಿರುವುದಕ್ಕೆ ಬಂದಿರುವುದು ಆರು ಲಕ್ಷ ರೂಪಾಯಿಗಳು ಮಾತ್ರ. ಅದೇಕೆ ಹಣ ವಸೂಲ್ಮಾಡುತ್ತಿಲ್ಲ?

ಈ 70-80 ಲಕ್ಷ ರೂಪಾಯಿಗಳನ್ನು ತಾವು ವಸೂಲಿ ಮಾಡಿದ್ದಿದ್ದರೆ ಅದನ್ನು ಸಾರ್ವಜನಿಕ ಕೆಲಸಗಳಿಗೆ ಉಪಯೋಗಿಸಬಹುದಾಗಿತ್ತಲ್ಲವೆ ? ಇದಕ್ಕೆ ಸರಿಯಾದ ಸಿಬ್ಬಂದಿಯನ್ನಿಟ್ಟಿತ್ತಲ್ಲವೇ? ಲಕ್ಷಾಂತರ ರೂಪಾಯಿಗಳ ಸಿಬ್ಬಂದಿ ಇಟ್ಟುಕೊಂಡು 60-70 ಲಕ್ಷ ರೂಪಾ

ಯಿಗಳ ಬಾಕಿ ಇರುವಕಡೆ ಕೇವಲ ಮೂರು-ನಾಲ್ಕು ಲಕ್ಷ ರೂಪಾಯಿಗಳನ್ನು ವಸೂಲು ಮಾಡುವುದೆಂದರೆ, ಯಾರಿಗೂ ಗೌರವತರತಕ್ಕದ್ದಾಗಿಲ್ಲ. ಸಂಬಂಧಪಟ್ಟ ಮಂತ್ರಿಗಳು ಇದನ್ನು ಕೂಡಲೆ ತನಿಖೆ ನಡೆಸಿ ವರದಿ ಮಾಡಬೇಕೆಂದು ಕೇಳುತ್ತೇನೆ.

ಮತ್ತೊಂದು ಬಹು ಮುಖ್ಯವಾದ ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕೆಂದಿದ್ದೇನೆ. ಈಗ ತಾವು ಆಹಾರಕ್ಕೆ ಸಂಬಂಧಪಟ್ಟ ಸಬ್‌ಸಿಡಿ ವಿಚಾರದ ನೀತಿ, ಹೆಚ್ಚು ಆಹಾರ ಬೆಳೆಯುವ ನೀತಿ ಎಂದು ನಾನಾ ರೀತಿಯ ಕಾರ್ಯನೀತಿಯನ್ನು ಹಾಕಿಕೊಂಡಿದ್ದೀರಿ. ಇದೆಲ್ಲಾ ಕೇವಲ 10 ಲಕ್ಷ ಪ್ರಜೆಗಳಿಗೆ ಆಹಾರವನ್ನು ಒದಗಿಸಿಕೊಳ್ಳುವುದಕ್ಕೆ ಮಾತ್ರ.

ಶ್ರೀ ಎಚ್. ಸಿ. ದಾಸಪ್ಪನವರು.—ಹತ್ತು ಲಕ್ಷ ಪ್ರಜೆಗಳಿಗೋ ಅಥವಾ 75 ಲಕ್ಷ ಪ್ರಜೆಗಳಿಗೋ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—10-15 ಲಕ್ಷ ಪ್ರಜೆಗಳಿಗೆ ಮಾತ್ರ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಇದಕ್ಕಾಗಿ ಸರಾಸರಿ ವರ್ಷವೊಂದಕ್ಕೆ 91 ಲಕ್ಷ ರೂಪಾಯಿಗಳು ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದೀರಿ. ಈ ಆಹಾರದ ಇಲಾಖೆಗೆ ಸರಾಸರಿ 39-40 ಲಕ್ಷ ರೂಪಾಯಿಗಳು ಕೇವಲ ಸಿಬ್ಬಂದಿಗಾಗಿ ಖರ್ಚಾಗುತ್ತಿವೆ. ಧಾರಣೆವಾಸಿಗಳು ಏರಿರುವುದರಿಂದ high price allowance ಎಂದು 96 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಜೊತೆಗೆ ಆಹಾರ ಉತ್ಪನ್ನ ಯೋಜನೆಗೆಂದು 72 ಲಕ್ಷದ 9 ಸಾವಿರ ರೂಪಾಯಿಗಳನ್ನು ಒದಗಿಸಬೇಕೆಂದಿದ್ದೀರಿ. ಹೀಗೆ ಒಟ್ಟು 298 ಲಕ್ಷ ರೂಪಾಯಿಗಳನ್ನು ಕೇವಲ ಕೆಲವು ಸಾರ್ವಜನಿಕರ ಆಹಾರಕ್ಕೆ ಮಾತ್ರ ಖರ್ಚುಮಾಡಲಾಗುತ್ತಿದೆ. ತಮಗೆ ಬೇಕಾಗಿರುವುದು ವರ್ಷವೊಂದಕ್ಕೆ 10 ಲಕ್ಷ ಪಲ್ಲ ದವಸ ಮಾತ್ರ. ಇದಕ್ಕಾಗಿ ವರ್ಷ ವರ್ಷ ಇಷ್ಟೊಂದು recurring ಖರ್ಚು ಮಾಡುವುದು ನ್ಯಾಯವೇ ಮತ್ತು ಧರ್ಮವೇ ಎನ್ನುವುದನ್ನು ನೀವೇ ಯೋಚನೆ ಮಾಡಿ. ನಾನು ಧೈರ್ಯವಾಗಿ ಕೇಳಬಲ್ಲೆ. ಹತ್ತು ಲಕ್ಷ ಪಲ್ಲ ದವಸ ದೊರಕಿಸಿಕೊಳ್ಳಲು 2½—3 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಸರಿಯೆ? ಅದೂ ಎಷ್ಟು ಜನರ ಹಿತಕ್ಕಾಗಿ? ರೇಷನ್ ಪ್ರದೇಶದಲ್ಲಿರುವ ಕೇವಲ 10-15 ಲಕ್ಷ ಪ್ರಜೆಗಳಿಗಾಗಿ ಮಾತ್ರ. ಲೆಕ್ಕ ಹಾಕಿದರೆ ಪಲ್ಲಾ ಒಂದಕ್ಕೆ ಸರಾಸರಿ 25 ರೂಪಾಯಿಗಳಂತೆ ಖರ್ಚುಮಾಡುತ್ತಾ ಇರುವಿರಿ. ಇದೇ ಇಪ್ಪತ್ತೈದು ರೂಪಾಯಿಗಳನ್ನು ನಮ್ಮ ರೈತರು ಖರ್ಚುಮಾಡಿದರೆ ಎಷ್ಟು ಪಲ್ಲ ಬೇಕಾದರೂ ಬೆಳೆದುಕೊಡುತ್ತಾರೆ. ಸುಮಾರು 2—3 ಲಕ್ಷ ಎಕರೆ ಜಮೀನನ್ನು ಸಾಗುವಳಿಗೆ ತಂದರೆ ಸಾಕು, ನಿಮಗೆ ಬೇಕಾದ ಆಹಾರ ಬೆಳೆಯಬಹುದು. ಹಾಲಿ ಹಿಡುವಳಿ ಬಂಜರು ಜಮೀನು ಸುಮಾರು 17 ಲಕ್ಷ ಎಕರೆ ನಮ್ಮ ದೇಶದಲ್ಲಿದೆ. ಸರಿಯಾದ ಅನುಭವಸ್ಥರೂ, ದಕ್ಷರೂ ಆದ ವ್ಯವಸಾಯಗಾರರು ಒಬ್ಬೊಬ್ಬರೂ 4-5 ಎಕರೆಗಳಂತೆ ಹಚ್ಚಿಗೆ ಸಾಗುವಳಿಗೆ ತಂದು ಬೆಳೆ ತೆಗೆಯಲು ಏರ್ಪಾಡು ಮಾಡಿದರೆ ಸಾಕು. ಅದರಿಂದ ಧಾರಾಳವಾಗಿ 10-15 ಲಕ್ಷ ಪಲ್ಲ ದವಸ ಉತ್ಪತ್ತಿಯಾಗುವುದರಲ್ಲಿ ಸಂದೇಹವಿಲ್ಲ. ಈಗ 150 ಟ್ರ್ಯಾಕ್ಟರುಗಳು, ಬುಲ್‌ಡೋಜರುಗಳು ಮುಂತಾದುವನ್ನು ತರಿಸಿ ಕೈಗೊಂಡಿರುವ ಯೋಜನೆಗಳು ಹೇಳುವುದಕ್ಕೇ ಅಸಾಧ್ಯವಾಗಿ ಹೋಗಿದೆ. ಈಗ ಕೈಗೊಂಡಿರುವ ಯೋಜನೆಗಳು ಖಂಡಿತ ಅಪ್ರಯೋಜಕ. ಕೇವಲ 10 ಲಕ್ಷ ಪಲ್ಲ ಬೆಳೆಯಲು ಇಂತಹ ಯೋಜನೆಗಳೇನೂ ಬೇಕಾಗಿಲ್ಲ. ಜನಾಬ್ ಇಮಾಂರವರು ಹೇಳಿದಂತೆ ದೇಶದಲ್ಲಿ ಅನುಭವವಿರುವವರ ಸಹಾಯ ಪಡೆಯಿರಿ. ಅವರು ತೀರಾ ದಡ್ಡರೆಂದು ಬಡಬೇಡಿ. ಖಂಡಿತವಾಗಿಯೂ ವ್ಯವಸಾಯಗಾರರು ಅವರ ಕಸಬಿನಲ್ಲಿ ತಮಗಿಂತಲೂ ಬುದ್ಧಿವಂತರು. ಇದು ನನ್ನ ಅನುಭವದ ಮಾತು. ವ್ಯವಸಾಯದ ಅನುಭವದ ವಿಚಾರದಲ್ಲಿ ಮಾತ್ರ ಅವರ ದಕ್ಷತೆಯನ್ನು ಪ್ರಶ್ನಿಸುವಂತಿಲ್ಲ. ಸರಿಯಾದ ರೀತಿಯಲ್ಲಿ ಅವರ ಸಹಾಯ ಪಡೆದರೆ ಮಾತ್ರ ಈ ಸಮಸ್ಯೆ ಪರಿಹಾರವಾಗುತ್ತದೆ.

ದೇಶದಲ್ಲಿ ನೀತಿಗೆ ಹೆಚ್ಚು ಬೆಲೆ ಕೊಡುತ್ತಿಲ್ಲ. ನೀತಿಯನ್ನು ಭದ್ರವಾದ ತಳಹದಿಯ ಮೇಲೆ ಸ್ಥಾಪನೆ ಮಾಡಿಲ್ಲ. ಹಿಂದೆ ಕಾಂಗ್ರೆಸ್ಸಿನವರು ಅಧಿಕಾರ ವಹಿಸುವಾಗ ಅನೇಕ ಲಂಚಕೋರ ಅಧಿಕಾರಿಗಳು ಗಡಗಡ ನಡಗುತ್ತಿದ್ದರು. ತಮ್ಮ ಗತಿ ಏನಾಗುತ್ತದೆಯೋ ಏನೋ ಎಂದು ಅಲ್ಲಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಅಂಥ ಪರಿಸ್ಥಿತಿ ಇತ್ತು. ಅನೀತಿಯುತರಾದ ಅಧಿಕಾರಿಗಳೂ, ಕಾಳಸಂತೆಕೋರರೂ ಲಂಚಕೋರರೂ ಆದವರ ಸ್ಥಿತಿ ಚಿಂತಾಜನಕವಾಗಿತ್ತು; ಆದರೆ ಏನಾಯಿತು? ಕಾಂಗ್ರೆಸ್ಸಿನವರು ಅಹಿಂಸಾ ಮಾರ್ಗವನ್ನನುಸರಿಸಲು ಆರಂಭಿಸಿದರು. "ಅಹಿಂಸಾ ಪರಮೋಧರ್ಮಃ" ಎಂಬುದೇ ಅವರ ಪರಮ ನೀತಿಯಾದದ್ದನ್ನು ತಿಳಿದು, ವಾತಾವರಣವೇ ಬದಲಾಯಿಸಿತು. ಇವರು ಅನುಸರಿಸಿದ ಈ ಅಹಿಂಸಾ ಮಾರ್ಗದಿಂದ ನೀತಿಯ ಮಟ್ಟವು ಅಧೋಗತಿಗಿಳಿದಿದೆ. ಇದನ್ನು ಸರಿಪಡಿಸಿದ ಹೊರತು ಪ್ರಯೋಜನ ಲಭಿಸಲಾರದು. ಆದ್ದರಿಂದ ಎಷ್ಟೇ ಶ್ರಮವಾದರೂ ಬಿಗಿಯಾದ ನೀತಿಯನ್ನನುಸರಿಸಿ, ದರ್ಪದಿಂದ ವರ್ತಿಸಿ ನೀತಿಯಮಟ್ಟವನ್ನು ಹೆಚ್ಚಿಸಿ, ಕಳೆದುಕೊಂಡಿರುವ ನೀತಿಯನ್ನು ಉಳಿಸಿಕೊಳ್ಳುವುದಕ್ಕೆ ಕಾರ್ಯ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಿ. ಅಂತಹ ಯಾವುದೇ ಕಾರ್ಯಕ್ರಮ ಕೈಗೊಂಡರೂ ಸಹ ಈ ಸಭೆಯ ಸಂಪೂರ್ಣ ಬೆಂಬಲ ತಮಗಿದೆ. ಇದು ಅತಿ ಜಾಗ್ರತೆಯೂ ಪರಿಣಾಮಕಾರಿಯಾಗಿಯೂ ಆಗಬೇಕೆಂದು ಆಶಿಸುತ್ತೇನೆ.

ಮತ್ತೊಂದು ಉದಾಹರಣೆ ಕೊಡುತ್ತೇನೆ. ಆಹಾರದ ಸಮಸ್ಯೆಯನ್ನು ಬಗೆಹರಿಸಲು ಬಾವಿಗಳಿಗೆ ಸಬ್ಸಿಡಿ ಕೊಡುತ್ತಿರುವಿರಷ್ಟೆ. ಆ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ಒಂದು ಬಾವಿ ತೆಗೆಯುವುದಕ್ಕೆ 4-5 ಸಾವಿರ ರೂಪಾಯಿ ಬೇಕು. 500 ರೂಪಾಯಿ ಮಾತ್ರ ಕೊಟ್ಟರೆ ಬಡವರಿಗೆ ಇದು ಸಾಕಾಗುವುದಿಲ್ಲ. ಸಬ್ಸಿಡಿಯನ್ನು ಕೊಡುವುದು ಬಾವಿಯನ್ನು ತೆಗೆದ ಮೇಲೆ. ಬಾವಿ ತೆಗೆಸುವುದಕ್ಕೆ ಶಕ್ತಿಯಿಲ್ಲದೆ ಇರುವ ಬಡವರಿಗೆ 500 ರೂಪಾಯಿಗಳ ಸಹಾಯ ಕೊಟ್ಟರೆ ಅದರಿಂದ ಅವನು ಬಾವಿ ತೆಗೆಯುವುದಕ್ಕೆ ಸಾಧ್ಯವಿಲ್ಲ. ಅನೇಕ ವೇಳೆ ಸಬ್ಸಿಡಿಯು ಅನಾಯುಕವಾಗುತ್ತದೆ. ಒಟ್ಟಿನಲ್ಲಿ ಸಬ್ಸಿಡೈಸೇಷನ್ ಪಾಲಿಸಿಯು ಅದು ಜಾರಿಯಲ್ಲಿರುವ ರೀತಿಯಲ್ಲಿ ಅನೀತಿಯುತವಾಗಿದೆ ಎಂದು ಒತ್ತಾಯ ಪೂರ್ವಕವಾಗಿ ತಿಳಿಸಬೇಕಾಗಿದೆ. ಈ ಹಣವೆಲ್ಲಾ ಅನುಕೂಲಸ್ಥರಿಗೇ ಬಹಳವಾಗಿ ಸಿಗುತ್ತಿದೆ. ಸಾರ್ವಜನಿಕರ ಹಣವನ್ನು ಸಬ್ಸಿಡಿಗಾಗಿ ಕೊಡುವುದು ನ್ಯಾಯವಲ್ಲ, ಧರ್ಮವೂ ಅಲ್ಲ ಅದು ನೀತಿಗೆ ವಿರೋಧವೆಂದು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ. ವಾಸ್ತವವಾಗಿ ಜನರಿಗೆ ಸಹಾಯ ಮಾಡಬೇಕೆಂಬ ಅಪೇಕ್ಷೆಯಿದ್ದರೆ ಸ್ವಶಕ್ತಿ ಹೆಚ್ಚುವ ರೀತಿಯಲ್ಲಿ ವಿಶೇಷ ರೀತಿಯ ಕಾರ್ಯಕ್ರಮವನ್ನು ತಗೆದುಕೊಳ್ಳಿ. ಹೆಚ್ಚಾಗಿ ಬೆಳೆಯುವುದಕ್ಕೆ ಸ್ವಶಕ್ತಿಯನ್ನು ಹೆಚ್ಚಿಗೆ ಮಾಡಬೇಕೇ ಹೊರತು, ಸಬ್ಸಿಡಿ ಕೊಡುವುದು ಸರಿಯಲ್ಲ.

ದ್ದರಿಂದ ಸಬ್ಸಿಡೈಸೇಷನ್ ಪಾಲಿಸಿಯನ್ನು ಆದಷ್ಟು ೇಗ ತೆಗೆದು ಹಾಕಿದ ಹೊರತು ದೇಶದಲ್ಲ ನೀತಿ ಉಳಿ ುವುದಿಲ್ಲ. ಇಷ್ಟು ಸಲಹೆ ಕೊಟ್ಟು, ಅಳಿಸಿಹೋಗಿ ುವ ನೀತಿಯನ್ನು ಉಳಿಸಿಕೊಳ್ಳಿ ಎಂದು ಹೇಳಿ ನನ್ನ ಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಸಭೆಯು ಉಪಾಹಾರಕ್ಕೆದ್ದು ುತ್ತೆ 4-15 ಗಂಟೆಗೆ ಸೇರುತ್ತದೆ.

The Assembly adjourned for Lunch at orty-five Minutes past Three of the lock and re-assembled at Fifteen Minutes ast Four of the Clock, Mr. Speaker Sri V. Venkatappa) in the Chair.

---

*Janab SYED ABDUR RAHMAN Chikmagalur *cum* Shimoga—Muslim).—Ir. Speaker, Sir, the Hon'ble Finance Iinister has placed in our hands so uch literature about the finances of he State that it is practically impossible for us within the short time at our isposal to go through the minute etails of the Budget, of the financial tatements and the Financial Memoranum and do full justice to many mportant issues and problems arising herefrom. What little time was vailable to us to study the literature vas just sufficient for us to only make ut the broad outlines of policy of the Government underlying the various mportant matters which are engaging heir attention at present. We are also n a position to see by a cursory glance vhat exactly is the financial position of he State. It may be that with regard o details we may not be able to find ut how exactly Mysore is financially ituated. But we know that the present Ministry had to face several problems nd issues of a very delicate nature to tart with this year, particularly, ntegration of finance and changes in he constitutional set-up. It was by o means a simple matter. It required ll their energy and attention, courage nd determination to see that they ompletely adjusted themselves to the new change-over and bring the whole hing into a working order. And to-day hey are in a position to place before he House a Budget which is a surplus one.

I take this opportunity of congratulating the Finance Minister and the Cabinet for having placed before this House a surplus Budget. My Hon'ble friend Janab Mahomed Imam referred in this connection to the canons of public finance and he also enunciated the principles on which the Budget should be framed and he tried to explain what really a surplus budget was and what really a surplus budget ought to be. I think so far as the canons of public finances are concerned, they have been kept in view by the present Finance Minister who has placed this Budget before us. Sir, let it not be forgotten that the present Cabinet had to face, as I said, very difficult problems; so many subjects had to be handed over to the Centre—lifted by the Centre, to use that expression. With regard to them, some arrangement had to be made. That also had to be looked into. I find that so far as this Budget is concerned, there are three essential characteristics. The first is this, I call the present Budget a historic budget in the sense that it is the first budget after the inauguration of the Republic of India—with a Constitution which guarantees to all the peoples of India justice, fraternity, equality and liberty; a Constitution which aims at welding together all the heterogeneous elements into one homogeneous whole; and a Constitution which aims at winding up all geographical and provincial barriers into one single citizenship—that is the atmosphere in which we have started our work in Mysore today. It is new in the sense that our Budget had to be adjusted according to the subjects that were allotted as per the arrangements that have been arrived at. It is also unusual in the sense that there is a new feature in that Volume II is given which is characterised as containing all the post-war development schemes and works relating to them. This has been bifurcated from the normal activities of other departments. Sir, this bifurcation may have been found necessary by the Finance Minister, but I want to ask him whether this bifurcation was necessary at all and whether all this could not have been included in the First

Part itself. I feel that all the detailed information with regard to the development schemes need not have been put in the shape of a separate volume in view of the economy measures that have got to be observed. It means voluminous accounting, it means additional staff for maintaining these accounts separately and all that and with our existing state of finances probably this might not have been necessary.

Now coming to the Budget proper Sir, among the various development schemes I find that about 14 lakhs of rupees have been sanctioned under Animal Husbandry. We have had and we are having numerous schemes—poultry farming to be introuduced, bee-keeping institutions to be introduced and on all these we are going to spend four lakhs of rupees. All these are meant for some experimental purposes. I want to ask : 'of what use is this going to be to the ordinary raiyat'. The raiyat must be in a position to know whether it will be within his own limit; whether he can make use of these experiments himself, whether he can run these concerns himself and whether he can succeed. I find that all these schemes are not helpful in the sense that there is no yield ; that these things do not pay and these are not remunerative in the long run except that we lose so much money. Instead we can as well use this money for various other more useful purposes. My Hon'ble Friend Sri H. M. Channabasappa was pointing out that the levy of the charges on the depots was certainly not necessary and that Government could have found money from their own resources and that this additional tax need not be levied merely for the sake of getting about twenty lakhs of rupees. I may not altogether agree with my Hon'ble friend Mr. H. M. Channabasappa in that matter, because we have seen what our food position has been for the last ten years. Our Government had to incur an expenditure of crores of rupees and the Government saw some light too late in the day to introduce this levy on the depots. If they had thought of some such scheme earlier and if they had devised these means of levying a tax on these foodgrains and non-rationed commodities, probably they would not have been in a position to incur so much loss of public money. In Madras rice was sold at the rate of two seers per rupee, Mysore was selling at a cheaper rate. Mysore was selling at the rate of three seers per rupee. If this had been done a little earlier probably we would not have incurred some of these losses. I do not altogether deny the right of the Government to levy tax even on ordinary rationed commodities or non-rationed commodities. Because any Government if it has to be financially strong as my Hon'ble friend Mr. Channabasappa put it, must maintain the budget balance. It was also said that if to-day we have got to float a loan, we shall not be able to get the money that we require. I cannot accept that charge, because it is just possible that our Government may have various means of inspiring confidence in the public and obtaining money for their purpose. But so long as they can find money without floating a loan, no one need deplore. Somewhere in the statement of the Hon'ble the Finance Minister it is stated that for financing some of the capital works it would be necessary perhaps in the future for us to borrow some money from the Centre or raise a loan.

Mr. SPEAKER.—Hon'ble Member has got two minutes more.

Janab SYED ABDUR RAHMAN.—I do not know whether considering the various problems the Central Government are concerned with, Mysore will be in a position to get as much money as it requires for financing capital outlays.

Since I am afraid my time is over, I would just like to refer to one of the points raised by the Hon'ble Member Sri Kadidal Manjappa while he was discussing the Budget. He said with regard to Urdu Schools that they need not exist as separate schools. I do not know what prejudice he has against a language which is spoken by Pandit Jawaharlal Nehru and leaders like Sir Tej Bahadur Sapru.

Sri Kadidal MANJAPPA (Shimoga District—General).—By way of personal explanation, Sir. ನಾನು ಉರ್ದು ಶಾಲೆಗಳು ಇರಬಾರದು ಎಂದು ಹೇಳಿದೆನೇ ಹೊರತು

ಉರ್ದು ಭಾಷೆಯನ್ನೇ ಮಾತನಾಡಬಾರದೆಂದು ಹೇಳಲಿಲ್ಲ. ಒಂದೇ ಶಾಲೆಯಲ್ಲಿ ಉರ್ದು ಕಲಿಯುವವರೂ, ಬೇರೆ ಭಾಷೆಗಳನ್ನು ಕಲಿಯುವವರೂ ವ್ಯಾಸಂಗ ಮಾಡಲಿ. ಮಹಮ್ಮದೀಯರಿಗೆ ಉರ್ದು ಕಲಿಸಲು ಮೌಲ್ವಿಗಳನ್ನು ನೇಮಕಮಾಡಿ ಎಂದು ಹೇಳಿದೆ.

Janab SYED ABDUR RAHMAN.—Denominational schools are not necessary if that is the purport of the scheme. I may tell him that after all Urdu is a language which is a kith and kin of Hindi which is the national language of India. So let them have the necessary facilities. Mysore has been very generous and let that generosity continue. Learning that language is not confined to any particular community. I want my friend to learn Hindi and Urdu.

Some HON'BLE MEMBERS.—Let him learn Kannada.

Janab SYED ABDUR RAHMAN.—I have studied Kannada up to the Lower Secondary standard.

Sri H. C. DASAPPA.—Speak in Urdu.

(Janab Syed Abdur Rahman began to speak in Urdu).

Sri M. N. JOIS.—I rise to a point of order, Mr. Speaker.

Mr. SPEAKER.—Hon'ble Member has got to give a translation of his remarks in Urdu.

Janab SYED ABDUR RAHMAN.—From no less a person than the Hon'ble the Finance Minister the suggestion has come.

Mr. SPEAKER.—Many will not able to follow.

(The Member resumed speaking in English.)

Janab SYED ABDUR RAHMAN.—Sir, with regard to various other schemes I find that in the way they have started doing things, results are sure to be convincing and positively good. So far as the intentions of the Government are concerned, I am not here to challenge their sincerity even for a second. The way in which they have justified themselves in these few months is a matter which we should admire and the figures they have presented to us are certainly very helpful in carrying out the programmes and the policies they have got before them.

One word with regard to the "Grow More Food" campaign. When such schemes have been introduced by the Government it is necessary that suitable facilities have to be given to the raiyats in time. You have got various schemes and the necessary money also. If what a raiyat requires by way of agricultural implements, by way of iron and steel materials, is not given in time he will be unable to produce food by the end of 50-51 which has been fixed as the period by which we should become self-sufficient. As the figures show in answer to a certain interpellation we know what the position is in 1950. We are deficit in paddy to the extent of 10 lakhs of pallas. We are not going to work a miracle in the period of one year. Therefore stringent measures will have to be introduced to see that all the agriculturists in the State get the necessary requirements, necessary equipment and necessary financial aid essential for growing more food in the State and thus enable Mysore to become self-sufficient by the end of 50-51.

With regard to Medical and Public Health.... ...

Mr. SPEAKER.—Hon'ble Member's time is up.

Janab SYED ABDUR RAHMAN.—I wish to say just a few words with regard to Medical and Public Health. There are very big hospitals in the Cities of Mysore and Bangalore, and I find in Volume II that for improving the hospitals in Mysore and Bangalore a sum of Rs. 8 lakhs is provided. My suggestion is to give up cities hereafter, and to do something in the rural areas. I think we need not pay our attention to cities. We shall devote all that money to rural areas so that proper medical aid may reach the village folk. In this connection I would also make a suggestion. There are people to-day who believe in Unani and Ayurvedic medicines. They are not so costly as allopathic. They are much cheaper and with a small expenditure you will be able to satisfy a large number of people in the State. The introduction of these systems of medicines would be very helpful for the improvement of villages.

As regards Public Health, I know a lot of money is being spent. Last time I had the privilege to mention in this House the definite improvements that were made. You have spent Rs. 21 lakhs lest year and this year you are going to spend much more. Health is the first concern of the people and undoubtedly you must spend on it. I saw the present Public Health Minister just now and said that the spraying of D D T is necessary in the City of Bangalore. I do not grudge any amount being spent so far as public health is concerned. Instead of paying all the attention to cities we should hereafter devote more attention to the village folk to improve their health conditions and give more facilities by providing mobile dispensaries and all that they need for the improvement of their health. In the Malnad the health of the people is not up to the standard. If you help Malnad people, I am sure, the malnad people alone will be able to produce food required by the end of 1950-51.

ಶ್ರೀ ಎಸ್. ಆರ್. ಗುರುಲಿಂಗಯ್ಯನವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ನಮ್ಮ ಸರ್ಕಾರದವರು ನಮ್ಮ ಮುಂದಿಟ್ಟಿರುವ ಬಡ್ಜೆಟ್ಟನ್ನು ಸ್ವಾಗತಿಸಬೇಕೋ, ನಿರಾಕರಿಸಬೇಕೋ ಒಂದೂ ನನಗೆ ಗೊತ್ತಾಗುತ್ತಿಲ್ಲ. ಈ ಎರಡು ದಿವಸಗಳೂ ನನಗೆ ಸಿಕ್ಕಿದ್ದ ಅವಕಾಶವನ್ನೆಲ್ಲಾ ನಾನು ಇದಕ್ಕಾಗಿ ವಿನಿಯೋಗ ಮಾಡಿ ನನ್ನ ಬುದ್ಧಿಯನ್ನೆಲ್ಲಾ ಉಪಯೋಗಿಸಿ, ಎಷ್ಟೋ ಶ್ರಮಪಟ್ಟಾಗ್ಯೂ, ಇದರ ಅರ್ಥವೇ ನನಗೆ ಆಗಲಿಲ್ಲ. ಯಾವ ಪುಟವನ್ನೇ ತೆಗೆದು ನೋಡಲಿ, ಎಲ್ಲಿ ನೋಡಿದರಲ್ಲಿ ವಿಪರೀತವಾಗಿ, ಅಸಂಖ್ಯಾತವಾಗಿ, ಬರೀ ಅಂಕಿಗಳು ಮಾತ್ರ ಉದ್ದಸಾಲು, ಅಡ್ಡಸಾಲು ಏಕಸಾಲ್ ಆಗಿ ಕಾಣುತ್ತಿವೆಯೇ ಹೊರತು ಬೇರೆ ಏನೂ ಇಲ್ಲ. ಇದರಲ್ಲಿ ಏನಾದರೂ ಪ್ರವೇಶ ಮಾಡಿದರೆ, ಚಕ್ರಬಿಂಬನ ಕೋಟೆಯಲ್ಲಿ ಹೋಗಿ ಸಿಕ್ಕಿಹಾಕಿಕೊಂಡು, ವಾಪಸ್ಸು ಬರುವುದಕ್ಕೆ ಸಾಧ್ಯವಾಗದೆ ಹೇಗೆ ತೊಂದರೆಯಾಯಿತೋ, ಅದೇ ರೀತಿ ನನಗೂ ತೊಂದರೆಯಾದೀತೆಂಬ ಭಯದಿಂದ ಇದರ ಒಳಹೊಕ್ಕು ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ಅದೇರೀತಿ ಈ ಇಂಟಿಗ್ರೇಷನ್ ವಿಚಾರದಲ್ಲಿಯೂ ನನಗೆ ಧೈರ್ಯ ಬರಲಿಲ್ಲ.

ಒಬ್ಬ ಮಾನ್ಯ ಸದಸ್ಯರು.—ತಾವು ಯಾವ ಕಾಲೇಜಿನವರು ?

ಶ್ರೀ ಎಸ್. ಆರ್. ಗುರುಲಿಂಗಯ್ಯನವರು.—ಮಹಾರಾಜ ಕಾಲೇಜಿನವರು. ಯಾವ ಕಾಲೇಜಾದರೇನು! The revenue gap gaped at me so ferociously that I had to take to heels. ಆದಕಾರಣ ನಾನು ಈ ಅಂಕಿ ಅಂಶಗಳ ಗೋಜಿಗೇ ಹೋಗುವುದಿಲ್ಲ. ಕೇವಲ ಒಂದೆರಡು ಸಲಹೆಗಳನ್ನು ಮಾತ್ರ ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

ನನಗೆ ತಿಳಿದಮಟ್ಟಿಗೂ ಈ ಲಂಚ ನಿರೋಧಕ ಇಲಾಖೆಗೆ ಒದಗಿಸಿರುವ ಹಣ ಏನೇನೂ ಸಾಲದು. ಆ ಇಲಾಖೆ ಕೆಲಸ ಮಾಡುತ್ತಿದೆಯೋ ಅಥವಾ ನಿದ್ರೆ ಮಾಡುತ್ತಿದೆಯೋ ಗೊತ್ತಾಗಲಿಲ್ಲ. ಅದರ ಚಟುವಟಿಕೆಗಳನ್ನು ನೋಡಿದರೆ ನನಗೆ ಹಾಗೆ ಅನ್ನಿಸುತ್ತದೆ. ಆದರೆ ಅವರಿಗೆ ತಾವು ಕೊಡುತ್ತಿರುವ ಉತ್ತೇಜನ ಸಾಲದೆಂದು ತೋರುತ್ತದೆ. ಆದ್ದರಿಂದ ಈ ಬಾಬಿಗೆ ಇನ್ನೂ ಹೆಚ್ಚು ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ. ಈ ಇಲಾಖೆಯ ಸಿಬ್ಬಂದಿಯನ್ನು ತಾವಿನ್ನೂ ಹೆಚ್ಚುಮಾಡಿ, ಚುರುಕಾಗಿ ಕೆಲಸ ನಡೆಯುವಂತೆ ಮಾಡಬೇಕು.

ಶ್ರೀ ಎಂ. ಎನ್. ಜೋಯಿಸರು.—"ಚುರುಕಾಗಿ" ಅಂದರೆ ಮಾನ್ಯಸದಸ್ಯರ ಅಭಿಪ್ರಾಯದಲ್ಲಿ "ಲಂಚ ರುಷುವತ್ತುಗಳು" ಜಾಸ್ತಿಯಾಗಬೇಕೆಂದೋ ಹೇಗೆ? (ನಗು!)

ಶ್ರೀ ಎಸ್. ಆರ್. ಗುರುಲಿಂಗಯ್ಯನವರು.—ಇನ್ನು ಎರಡನೆಯದಾಗಿ ಇನ್‌ಫರ್‌ಮೇಷನ್ ಬುಲೆಟಿನ್ ವಿಚಾರದಲ್ಲೂ ತಾವು ಅಷ್ಟು ಸಮರ್ಪಕವಾದ ಮಾರ್ಪಾಡನ್ನು ಮಾಡಿಲ್ಲ. ಅಂತೂ "ಇನ್‌ಫರ್‌ಮೇಷನ್ ಬುಲೆಟಿನ್" ಎಂಬ ಸುಮಾರು 40—50 ಪುಟಗಳ ಪುಸ್ತಕ ಒಂದು ತಿಂಗಳಿಗೊಮ್ಮೆ ಬರುತ್ತದೆ. ಆ ಪುಸ್ತಕದಲ್ಲಿ ಎಲ್ಲಿ ನೋಡಲಿ, ನಮ್ಮ ಮಂತ್ರಿಗಳು ಅಲ್ಲಿಗೆ ಹೋದರು, ಇಲ್ಲಿಗೆ ಬಂದರು, ಎಂದು ತಿಂಗಳಾನುಗಟ್ಟಲೆಯ ಹಳೆಯ ಸುದ್ದಿಗಳೂ, ಮತ್ತು ಮಂತ್ರಿಗಳ ಮೇಲೆ ಆರೋಪಣೆಗಳ ಸುರಿಮಳೆಯನ್ನು refute ಮಾಡಲು ಬೇಕಾಗುವ ಅಂಕಿ ಅಂಶಗಳೇ ಇಲ್ಲ. ಆದರೆ ಆ ಬಗ್ಗೆ ಮಂತ್ರಿವರ್ಯರು ತಮ್ಮ ಘನತೆ ಗೌರವಗಳನ್ನು ಕಾಪಾಡಿಕೊಳ್ಳಲು ಅದರ ವಿಷಯವಾಗಿ ಸತ್ಯಾಂಶವೇನಿದೆ ಎಂಬ ಬಗ್ಗೆ ಅಂಕಿ ಅಂಶಗಳೊಡನೆ ಸಮುಜಾಯಿಷಿಯ ಲೇಖನಗಳೊಂದೂ ಬರುತ್ತಿಲ್ಲ. ಮಳೆ ಬಂದಾಗ ಸಾವಿರಾರು ಈಚಲ ಹುಳುಗಳು ಹೇಗೆ ಹುಟ್ಟುತ್ತವೆಯೋ ಹಾಗೆಯೇ ಮಂತ್ರಿಗಳ ಮೇಲೆ ಆರೋಪಣೆಗಳು ಹುಟ್ಟುತ್ತಿವೆ. ಆದರೆ ಆ ಹುಳುಗಳು ತಕ್ಷಣ ಸತ್ತುಹೋಗುವಂತೆ ಆ ದೋಷಾರೋಪಣೆಗಳು ನಶಿಸಿಹೋಗುವಂತೆ ತಕ್ಕ ಸಮುಜಾಯಿಷಿಯ ಲೇಖನಗಳು ಬರುತ್ತಿಲ್ಲ. ಹೀಗೆ ನಡೆಯುತ್ತಿರುವ ಅಪಪ್ರಚಾರವನ್ನು ತಾವು ತಡೆಗಟ್ಟಬೇಕೆಂದು ಹೇಳುತ್ತೇನೆ. ಹಾಗೆ ಮಾಡದೆ ಇದ್ದ ಪಕ್ಷದಲ್ಲಿ ಈ ಬುಲೆಟಿನ್ ನಿಲ್ಲಿಸುವುದು ಸೂಕ್ತವೆಂದು ನನ್ನ ಅಭಿಪ್ರಾಯ.

ಇನ್ನು ಈ ಹೆಚ್ಚು ಆಹಾರ ಬೆಳೆಯುವ ವಿಚಾರವಾಗಿ ಗ್ರಾಮಾಭಿವೃದ್ಧಿ ಇಲಾಖೆಯವರು ಅನೇಕ ವಿಚಾರವನ್ನು ಪ್ರಕಟಣೆ ಹೊರಡಿಸುತ್ತಿದ್ದಾರೆ. ಆದರೆ ತಾವು ಈ ಬಾಬುಗಳಿಗೆ ಈ ರೀತಿ ಹಣವನ್ನು ಖರ್ಚು ಮಾಡುವುದಕ್ಕೆ ಬದಲಾಗಿ ಈ ಹಣವನ್ನೆಲ್ಲಾ 'ಕಾಂಪೋಸ್ಟ್ ಗೊಬ್ಬರ' ಇತ್ಯಾದಿಗಳ ತಯಾರಿಕೆಗಾಗಿ ಖರ್ಚು ಮಾಡಿದ್ದರೆ ಚೆನ್ನಾಗಿತ್ತೆಂದು ತಿಳಿಸುತ್ತೇನೆ. ಇದೂ ಅಲ್ಲದೆ ಈ ಹಣವನ್ನು ಈಗ ತಾವು ಈ ಬಾಬಿನಲ್ಲಿ ಖರ್ಚು ಮಾಡುತ್ತಿರುವುದರಿಂದ ಹಳ್ಳಿಯ ಜನರಿಗೆ ಇದರಿಂದ ಏನೇನೂ ಪ್ರಯೋಜನವಾಗುತ್ತಿಲ್ಲ. ಕಾರಣವೇನೆಂದರೆ, ಅವರಿಗೆ ಇವರು ಬರವಣಿಗೆಯಲ್ಲಿ ತಿಳಿಸಿರುವುದನ್ನು ಓದಿ ಅರ್ಥಮಾಡಿಕೊಳ್ಳುವಷ್ಟು ಸಾಮರ್ಥ್ಯ ಉಂಟಾಗಿಲ್ಲ. ಆದುದರಿಂದ ತಾವು ಈ ರೀತಿ ಹಣವನ್ನು ಪೋಲು ಮಾಡುವುದಕ್ಕೆ ಪ್ರತಿಯಾಗಿ ಒಂದು ಫಿಲಂ ತಯಾರಿಸಿ, ತನ್ಮೂಲಕ ಹಳ್ಳಿಯ ಜನರಿಗೆ ಉಪದೇಶ ಮಾಡಿದ್ದರೆ ಎಷ್ಟೋ ಪ್ರಯೋಜನವಾಗುತ್ತಿತ್ತು. ಈಗ ತಾವು ಮಾಡುತ್ತಿರುವ ವಿಧಾನದಲ್ಲಿ ನೂರರಲ್ಲಿ ಒಂದುಪಾಲು ಸಹ ಅವರಿಗೆ ಅರ್ಥವಾಗಲೀ, ಅದರ ಪ್ರಯೋಜನವಾಗಲೀ ಆಗುತ್ತಿಲ್ಲ. ಇದನ್ನೆಲ್ಲಾ ತಾವು ಸಂಪೂರ್ಣವಾಗಿ ಮಾರ್ಪಾಡುಮಾಡಬೇಕೆಂದು ಹೇಳುತ್ತೇವೆ.

ಕೊನೆಯದಾಗಿ, ನಾನು ತಮ್ಮಲ್ಲಿ ಒಂದು ವಿಚಾರ ತಿಳಿಸಿ ನನ್ನ ಭಾಷಣವನ್ನು ಪೂರ್ತಿ ಮಾಡುತ್ತೇನೆ. ಹೆಚ್ಚು ಕಾಲವನ್ನೂ ಸಹ ನಾನು ತೆಗೆದುಕೊಳ್ಳುವುದಿಲ್ಲ. ನಾನು ಯಾವ ಹಳ್ಳಿಗೇ ಹೋಗಲಿ, ಎಲ್ಲಿ ಹೋದರೆ ಅಲ್ಲಿ, ಜನರು ಈಗಿನ ಸರ್ಕಾರದಲ್ಲಿ ಮತ್ತು ಮಂತ್ರಿಗಳಲ್ಲಿ ಕೋಮುವಾರು ಭಾವನೆ ತಾಂಡವವಾಡುತ್ತಿದೆಯೆಂದು ಆಡಿಕೊಳ್ಳುತ್ತಿರುವುದು ನನ್ನ ಸ್ವಂತ ಅನುಭವಕ್ಕೆ ಬಂದಿರುವ ವಿಚಾರವಾಗಿದೆ. ಅಂತೂ ಈ ಒಂದು ಭಾವನೆ ದೇಶದ ಜನರಲ್ಲಿಯೂ, ಅಧಿಕಾರಗಳಲ್ಲಿಯೂ ಬಲವಾಗಿ ಮೂಡಿಹೋಗಿದೆ.

ಇದೇ ಸಂದರ್ಭದಲ್ಲಿ ನಾನು ಇನ್ನೊಂದು ಅಂಶವನ್ನು ತಿಳಿಸಲಿಚ್ಛಿಸುತ್ತೇನೆ. ಒಬ್ಬ ಸರ್ಕಾರಿ ನೌಕರನ ವಿಚಾರವಾಗಿ ಮೇಲಧಿಕಾರಿಗಳಿಗೆ ಫಿರ್ಯಾದು ಕೊಟ್ಟಾಗ ಆ ಅಧಿಕಾರಿಗಳು, 'ಏನು ಮಾಡುವುದು, ಈ ನೌಕರನು ಮಂತ್ರಿಗಳ ಕೋಮಿನವನಾಗಿರುವುದರಿಂದ ಆತನ ಮೇಲೆ ಕಾರ್ಯಕ್ರಮವನ್ನು ಕೈಗೊಂಡರೆ ಮಂತ್ರಿಗಳೇನು ಕೋಪ ಮಾಡುತ್ತಾರೋ' ಎಂದು ಹಿಂದೂ ಮುಂದೂ ನೋಡುತ್ತಿದ್ದ ಪ್ರಸಂಗವೊಂದು ಅನುಭವಕ್ಕೆ ಬಂದಿದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅದು ಆಫೀಸರ ತಪ್ಪು.

ಶ್ರೀ ಎಸ್. ಆರ್. ಗುರುಲಿಂಗಯ್ಯನವರು.—ತಾವು ಈ ಬಗ್ಗೆ, ನಾವು ಅಂಥ ಸರ್ಕ್ಯುಲರ್ ಕಳುಹಿಸಿದ್ದೇವೆ, ಇಂಥ ಸರ್ಕ್ಯುಲರ್ ಕಳುಹಿಸಿದ್ದೇವೆ, ಎಂದು ಹೇಳಬಹುದು. ಆದರೆ ಅವೆಲ್ಲ ಕೇವಲ ಕಾಗದದ ಮೇಲೆ ಉಳಿದಿರುತ್ತವೆ, ಅಷ್ಟೇ. ಅವುಗಳು ಪುಸ್ತಕ, ಫೈಲುಗಳಲ್ಲಿ ಇರಬಹುದೇ ಹೊರತು ಕಾರ್ಯಾಚರಣೆಯಲ್ಲಿ ಕಂಡ ಬರುತ್ತಿಲ್ಲ. ಈ ವಿಚಾರದಲ್ಲಿ ಆದಷ್ಟು ಜಾಗ್ರತೆಯಾಗಿ ತಾವು ಈ ಮನೋಭಾವ ಅಧಿಕಾರಿಗಳಲ್ಲಾಗಲೀ, ಅಥವಾ ಮತ್ತೆ ಯಾರಲ್ಲೇ ಆಗಲಿ ಇಲ್ಲದಂತೆ ಮಾಡಬೇಕು. ಇಲ್ಲವಾದರೆ ಮುಂದೆ ತಮಗೆ ಸಾರ್ವಜನಿಕರ ಮತ್ತು ಅಧಿಕಾರಿಗಳ ಬೆಂಬಲ ನೂರರಲ್ಲಿ ಒಂದು ಪಾಲೂ ಸಹ ಸಿಕ್ಕಲಾರದು. ಆದುದರಿಂದ ಆದಷ್ಟು ಜಾಗ್ರತೆ ನಾನಾಗಲೇ ತಿಳಿಸಿದ ಆ ಲಂಚ ನಿರೋಧಕ ಇಲಾಖೆ, ಇರ್ಫರ್ಮೇಷನ್ ಬ್ಯುರೋ ಮತ್ತು ಈ ಅಧಿಕಾರವೃಂದದಲ್ಲಿರುವ ಕೋಮುವಾರು ಭಾವನೆ, ಇವುಗಳ ಬಗ್ಗೆ ತಕ್ಕ ಕಾರ್ಯಾಚರಣೆಯನ್ನು ಕೈಗೊಂಡು ಇವುಗಳನ್ನು ಉತ್ತಮಪಡಿಸಲು ಸರ್ಕಾರದವರು ತೀವ್ರ ಗಮನ ಕೊಡಬೇಕೆಂದು ಹೇಳಿ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು (ಹಾಸನ ಜಿಲ್ಲೆ).—ಅಧ್ಯಕ್ಷರೇ, ಈ ಎರಡು ದಿವಸಗಳ ಭಾಷಣಗಳನ್ನೂ ಕೇಳಿದ ಮೇಲೆ ನನ್ನ ಮನಸ್ಸಿಗೆ ಒಂದು ಆಶ್ಚರ್ಯಕರವಾದ ಸಂಗತಿ ಹೊಳೆದು ಬಂದಿದೆ. ಅದೇನೆಂದರೆ—ಕೆಲವರು ಈಗಿನ ಮಂತ್ರಿಗಳು ಮಂಡಿಸಿರುವ ಬಡ್ಜೆಟ್ಟಿನಲ್ಲಿ ಏನೂ ತಿಳಿಸಿಲ್ಲ, ಅಂಥ ಪ್ರಗತಿದಾಯಕವಾದ ವ್ಯಾಪಾರಾಡುಗಳೇನೂ ಕಂಡುಬರುತ್ತಿಲ್ಲ, ಎಂಬುದಾಗಿ ಹಿಂದೆ ಆಡಳಿತ ನಡೆಸುತ್ತಿದ್ದಂಥ ಜನಾಬ್ ಇಮಾಂರವರೇ ಆ ರೀತಿಯಾಗಿ ಹೇಳಿದ್ದಾರೆ. ಹಾಗೆ ಹೇಳುತ್ತ ಒಂದು ಕಡೆ ಅನೇಕವಾಗಿ ಸ್ಕೂಲುಗಳನ್ನು ಕಾಲೇಜುಗಳನ್ನು ಮತ್ತು ಹೆಚ್ಚು ಹೆಚ್ಚಾಗಿ ಟೆಕ್ನಿಕಲ್ ಮತ್ತು ಆಕ್ಯುಪೇಷನಲ್ ಇನ್‌ಸ್ಟಿಟ್ಯೂಷನ್‌ಗಳನ್ನು ತೆರೆಯಬೇಕೆಂದೂ, ಗೊಬ್ಬರ, ನೇಗಿಲು ಇತ್ಯಾದಿಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಹೆಚ್ಚು ಹೆಚ್ಚಾಗಿ ತೆರೆಯಬೇಕೆಂದೂ, ಜನಜೀವನದ ಮಟ್ಟ ಹೆಚ್ಚಿಸಲು ಎಲ್ಲಾ ಪ್ರಗತಿದಾಯಕವಾದ ಏರ್ಪಾಡುಗಳನ್ನು ನಡೆಸಬೇಕೆಂದೂ ಸೂಚಿಸಿ ಮತ್ತೊಂದು ಕಡೆ ಜನರ ಮೇಲೆ ಯಾವ ವಿಧವಾದ ತೆರಿಗೆಗಳನ್ನೂ ಹಾಕಬಾರದೆಂದು ಹೇಳತಕ್ಕದ್ದು ಪೂರಾ ಆಶ್ಚರ್ಯವನ್ನುಂಟುಮಾಡತಕ್ಕದ್ದಾಗಿದೆ. ಇಷ್ಟೇ ಅಲ್ಲದೆ, ಮತ್ತೆ ಕೆಲವರು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಹತ್ತಾರು ಕೋಟಿ ರೂಪಾಯಿಗಳನ್ನು ದುರ್ವ್ಯಯ ಮಾಡಿದ್ದಾರೆ, ಪೋಲುಮಾಡಿದ್ದಾರೆಂಬುದಾಗಿ ಹೇಳಿದ್ದಾರೆ. ಆದರೆ ಈ ಮಾತುಗಳಲ್ಲಿ ಏನೂ ಸತ್ಯಾಂಶವಿಲ್ಲ. ಇದಾದರೂ ಸಾರ್ವಜನಿಕರ ಹಣ. ಒಂದು ವೇಳೆ ಮಂತ್ರಿಗಳು ಹೀಗೆಲ್ಲ ಖರ್ಚು ಮಾಡಿದ್ದರೆ, ಇವರ ಗತಿ ಇನ್ನೂ ಏನೇನಾಗುತ್ತಿತ್ತೋ ಹೇಳುವುದಕ್ಕಾಗುವುದಿಲ್ಲ. ಹಿಂದಿನ ಮಂತ್ರಿಮಂಡಲವಾದರೋ, ಕೇವಲ ಮಹಾರಾಜರವರಿಗೊಬ್ಬರಿಗೆ ಮಾತ್ರ ಜವಾಬ್ದಾರಿಯಾಗಿತ್ತು. ಆದರೆ ಈಗಿರತಕ್ಕ ಮಂತ್ರಿ ಮಂಡಲ ಆ ರೀತಿಯದಲ್ಲ. ಈಗಿರತಕ್ಕ ಮಂತ್ರಿ ಮಂಡಲ ಅತ್ತ ಮಹಾರಾಜರಿಗೂ, ಇತ್ತ ಶಾಸನ ಸಭೆಗೂ ಜವಾಬ್ದಾರರಾಗಿದ್ದಾರೆ. ಅಷ್ಟೇ ಅಲ್ಲದೆ, ಇವರು ಒಂದು ಪಾರ್ಟಿ ಶಿಸ್ತಿಗೆ ಒಳಗಾಗಿ ಯಾರೂ ಯಾವ ಗುಟ್ಟೂ ಇಲ್ಲದೆ ಎಲ್ಲವನ್ನೂ ಹೊರಗೆಡವಿ, ಯಾವ ಕಳಂಕಕ್ಕೂ ಮಾರ್ಗವಿಲ್ಲದಂತೆ ಅಧಿಕಾರ ಮಾಡಲು ನಾನಾ ಹಿಡಿತಗಳನ್ನು ಹಾಕಲಾಗಿರುತ್ತದೆ. ಇಷ್ಟು ಕಟ್ಟುಪಾಡುಗಳನ್ನೂ, ಶಿಸ್ತನ್ನೂ ಪಾಲಿಸಿಕೊಂಡು ಕೆಲಸ ಮಾಡುತ್ತಿರುವುದು ಈಗಿರುವ ಪ್ರಜಾಸರ್ಕಾರದ ಮಂತ್ರಿಮಂಡಲ. ಜನಗಳೆಲ್ಲರಿಗೂ ಅನುಕೂಲವಾಗುವಂಥ ಒಂದು ಸಾತ್ವಿಕಮಾರ್ಗದಲ್ಲಿ ಇದು ಈಗ ನಡೆದುಕೊಂಡು ಹೋಗುತ್ತಿದೆ. ಇಂಥಾ ಸರ್ಕಾರವನ್ನು ಹೀಗೆ ಹೀಯಾಳಿಸಿ ಮಾತನಾಡಿದವರ ಮನೋಭಾವ ಹೇಗಿರುತ್ತೆಂಬುದನ್ನೂ ಮತ್ತು ಅದಕ್ಕೆ ಕಾರಣವೇನಿರಬೇಕೆಂಬುದನ್ನೂ ಆಲೋಚನೆ ಮಾಡಬೇಕಾಗಿದೆ.

ಈ ಮೂರು ವರ್ಷಗಳಲ್ಲಿ ಆಗಿರತಕ್ಕ ಕೆಲಸಗಳನ್ನು ನೋಡಿದರೆ ವಾತಾವರಣ ಎಷ್ಟೊಂದು ವ್ಯತ್ಯಾಸವಾಗಿದೆಯೆಂಬುದು ಗೊತ್ತಾಗುತ್ತದೆ. ಎಲ್ಲಾ ಕಡೆಯಲ್ಲೂ ಒಂದು ಹೊಸ ಲವಲವಿಕೆ ಕಾಣುತ್ತಿದೆ. ಕೈಗಾರಿಕೆಯಲ್ಲಾಗಲೀ, ವ್ಯವಸಾಯದಲ್ಲಾಗಲೀ ಯಾವುದು ನೋಡಿದರೂ ಅಭಿವೃದ್ಧಿಯ ಚಿಹ್ನೆಗಳಿವೆ. ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ಹೊಸ ಕೈಗಾರಿಕೆ ಮುಂದಕ್ಕೆ ಬರುತ್ತಿದೆ............

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹಾಸನ ಡಿಸ್ಟ್ರಿಕ್ಟಿನಲ್ಲಿ ಯಾವುದು ಬರುತ್ತಿದೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹೆಂಚಿನ ಕಾರ್ಖಾನೆ, ವೃತ್ತಿಶಿಕ್ಷಣಶಾಲೆ—ಇವೆಲ್ಲಾ ಇವೆ. ಈ ರೀತಿ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಹೊಸ ಪ್ರಯತ್ನವನ್ನು ನಡೆಸಿದ್ದಾರೆ. ಅದೂ ಇಂಥ ಕಷ್ಟಕಾಲದಲ್ಲಿ ಇಷ್ಟೊಂದು ಮಾಡಿರುವುದು ಬಹಳ ಸಾಹಸದ ಮತ್ತು ಬುದ್ಧಿವಂತಿಕೆಯ ಕೆಲಸವೆಂದೇ ಹೇಳಬೇಕು. ಈ ವಿಚಾರವನ್ನು ನಾವು ಹೇಳುವುದೇ ಅಲ್ಲಾ, ಶ್ರೀಮನ್ಮಹಾರಾಜರವರೂ ಕೂಡ ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಮಹಾರಾಜರವರ ಭಾಷಣದಲ್ಲಿ ಇವಾವುದಕ್ಕೂ ಸೂಚನೆ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಆದರೂ ಶ್ರೀಮನ್ಮಹಾರಾಜರವರು ನಾವು ಹೇಳುವುದಕ್ಕೆ ಮುಂಚೆ ತಾವೆಯೇ ಜನರು ತಪ್ಪುದಾರಿಯಲ್ಲಿ ಹೋದಾರು ಎಂಬ ಆಶಯದಿಂದ ಒಂದು ಟಿಪ್ಪಣಿ ರೂಪದಲ್ಲಿ ತಮ್ಮ ಭಾಷಣದಲ್ಲಿ ಹೇಳಿದ ಮೇಲೆಯೂ ನಾವುಗಳು ತಪ್ಪು ವ್ಯಾಖ್ಯಾನ ಮಾಡುವುದು ನಮ್ಮ ಘನತೆಗಾಗಲೀ, ತಿಳುವಳಿಕೆಗಾಗಲಿ ಗೌರವ ತಂದಹಾಗಾಗುವುದಿಲ್ಲವೆಂದು ಹೇಳಬೇಕಾಗುತ್ತದೆ.

ಈಗ ನಾವು ಈ ಬಡ್ಜೆಟ್ಟನ್ನು ಒಂದೊಂದು ಇಲಾಖೆಯ ವಿಷಯದಲ್ಲೂ ಚರ್ಚೆ ಮಾಡುವುದಕ್ಕೆ ಪ್ರಯತ್ನ

ಪಡುವ ಅವಶ್ಯಕವಿಲ್ಲ. ಅದಕ್ಕೆ ಮುಂದೆ ಖೋತಾ ಸೂಚನೆಯಲ್ಲಿ ಅವಕಾಶವಿದೆ. ಸದ್ಯಕ್ಕೇನಿದ್ದರೂ ನಾವಿಲ್ಲಿ ಹತ್ತಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ತೋರಿಸಿರುವುದರಿಂದ ಜನಜೀವನದ ಸುಖಕ್ಕೆ ಅದು ಸಹಕಾರಿಯಾಗಿದೆಯೇ, ನಾವು ಮಾಡಿರತಕ್ಕ ಕೆಲಸಗಳು ಯಾವುವಾದರೂ ಕಾರ್ಯ ರೂಪಕ್ಕೆ ಬರದೆ dead letter ಆಗಿ ಉಳಿದಿವೆಯೇ ಎಂಬುದನ್ನು ಹೇಳಿದರೆ ಸಾಕೆಂದು ನಾನು ತಿಳಿದಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಎರಡು legislationಗಳನ್ನು ನಾವು ಯೋಚನೆ ಮಾಡಬೇಕಾಗಿದೆ. ಒಂದು ಪಾನ ನಿರೋಧ, ಎರಡನೆಯದು ಗೋವಧೆಯನ್ನು ನಿರೋಧಿಸುವುದು. ಪಾನನಿರೋಧದ ವಿಚಾರದಲ್ಲಿ ಒಂದು ವಿಧದಲ್ಲಿ ಉದಾತ್ತವಾದ, ತಾತ್ವಿಕವಾದ ರೀತಿಯಲ್ಲಿ ಹೋಗಬೇಕಾಗಿದೆ, ನಾವೀಗ ಇದುವರೆಗೂ ಪ್ರಯತ್ನ ಪಟ್ಟಿದ್ದರಲ್ಲಿ ಅರ್ಧದಷ್ಟು ಕಾರ್ಯ ರೂಪಕ್ಕೆ ತಂದಿದ್ದೇವೆ. ಆದರೆ ದುರದೃಷ್ಟವಶಾತ್ ಎಷ್ಟು ಫಲ ನಿರೀಕ್ಷಿಸಿದೆವೋ ಅಷ್ಟು ಫಲ ಬರಲಿಲ್ಲ. ಜನರೇನೂ ಕುಡಿತ ಬಿಡಲಿಲ್ಲ, ಸರ್ಕಾರದವರಿಗೆ ಮಾತ್ರ ನಷ್ಟವಾದ ಹಾಗಾಯಿತು. ಆದ್ದರಿಂದ ನಾವೀಗ ಮಾಡಿರತಕ್ಕ ಕೆಲಸದಲ್ಲಿ ನಾವು ಎಷ್ಟರ ಮಟ್ಟಿಗೆ, ಯಾವ ರೀತಿಯಲ್ಲಿ ಮುಂದಕ್ಕೆ ಹೋಗಬೇಕೆಂಬುದನ್ನು ಯೋಚನೆ ಮಾಡಬೇಕು, ಹಾಲಿ ನಾವು ಮಾಡಿರುವ ಕಾರ್ಯವನ್ನು ಯಾವ ರೀತಿ ಕ್ರೋಢೀಕರಿಸಬೇಕೆಂಬುದು ಒಂದು ಮುಖ್ಯ ವಿಷಯ. ಸರ್ಕಾರದವರು ಈ ಅಂಶವನ್ನು ಮನಗಂಡು ಸಮಯೋಚಿತವಾದ ರೀತಿಯಲ್ಲಿ ನಡೆದುಕೊಂಡಿರುವುದಕ್ಕಾಗಿ ನಾನು ಅಭಿನಂದಿಸುತ್ತೇನೆ. ಮುಂದೆ ಇದನ್ನು ಮತ್ತೆ ಮುಂದುವರಿಸಬೇಕಾದರೆ ಸರಿಯಾಗಿ ಆಲೋಚನೆ ಮಾಡಿ ಸೂಕ್ತ ಪರಿಶೀಲನೆಗಳನ್ನು ನಡೆಸಿ ಮುಂದಿನ ಹೆಜ್ಜೆಯಿಡುವುದು ಅವಶ್ಯಕವೆಂದು ಹೇಳುತ್ತೇನೆ.

ಇದು ಗೋವಧೆ ನಿರೋಧದ ಕಾನೂನು. ಇದನ್ನು ಸರ್ಕಾರದವರು ಆದಷ್ಟು ಜಾಗ್ರತೆ ಜಾರಿಗೆ ತರುವುದು ಅವಶ್ಯಕ. ನಮ್ಮ ದೇಶದಲ್ಲಿರತಕ್ಕ ಈ ಗೋವುಗಳಿಗೆ ಸರಿಯಾದ ರಕ್ಷಣೆ ಕೊಟ್ಟು ಅವು ಕಟುಕರ ಕೈಗೆ ಹೋಗುವುದನ್ನು ತಪ್ಪಿಸಬೇಕೆಂಬ ಉದಾತ್ತ ಧ್ಯೇಯ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಇದೆಯೆಂಬುದು ನಿಜ. ಆದರೆ ಹೀಗೆ ಕಾನೂನೊಂದನ್ನು ಮಾತ್ರ ಮಾಡಿ ಅದನ್ನು ಕಾರ್ಯರೂಪಕ್ಕೆ ತರದೆ ಹೋದರೆ ಏನು ಪ್ರಯೋಜನ? ಈಗ ಯಾವ ಸ್ಥಿತಿಯಲ್ಲಿದೆಯೆಂದರೆ, ಕಾನೂನನ್ನೇನೋ ಮಾಡಿದ್ದೇವೆ. ಆದರೆ, ಆ ಮುದಿಯಾದ ದನಗಳಿಗೆ ರಕ್ಷಣೆ ಕೊಡುವುದಕ್ಕೆ ಸರಿಯಾದ ವ್ಯವಸ್ಥೆ ಮಾಡಿಲ್ಲ. ಇತ್ತ ಕಟುಕರೂ ತೆಗೆದು ಕೊಂಡು ಹೋಗುವ ಹಾಗಿಲ್ಲ. ಸರಿಯಾದ ರಕ್ಷಣೆ ಕೊಡಬೇಕೆಂದರೆ ಅದಕ್ಕೆ ಹತ್ತಾರು ಕೋಟಿ ರೂಪಾಯಿಗಳು ಬೇಕಾಗುತ್ತವೆ. ನಿಜವಾಗಿ ಸಂಪೂರ್ಣ ರಕ್ಷಣೆ ಕೊಟ್ಟು ಈ ಕಾನೂನಿಗೆ ಮಾನ್ಯತೆ ಕೊಡಬೇಕಾಗಿರುವುದನ್ನು ನಾವಿಂದು ಮಾಡಿಲ್ಲವೆಂದರೆ ಈ ಕಾನೂನು ಅಷ್ಟು ಪ್ರಯೋಜನಕಾರಿಯಾಗಲಿಲ್ಲವೆಂದು ಹೇಳಬೇಕಾಗಿದೆ. ಈಗ ವಾಸ್ತವವಾಗಿ ಆಗಿರತಕ್ಕ ತೊಂದರೆಯೇನೆಂದರೆ ಕಟುಕರಿಗೆ ಹೋಗತಕ್ಕ ರಾಸುಗಳೂ ಅವರಿಗೆ ಹೋಗದೆ ಪೋಲಿ ಬಿದ್ದು ಒಂದು ಕಡೆ ಇತರ ದನಗಳ ಆಹಾರವನ್ನು ಅವು ತಿನ್ನುವಂತಾಗಿದೆಯಲ್ಲದೆ, ಮನುಷ್ಯರ ಆಹಾರವನ್ನೂ ತಿನ್ನುವುದಕ್ಕೆ ಕಾರಣವಾಗಿದೆ. ಹೀಗಾಗಿ ನಮಗೆ ಒಂದು ಕಡೆ ಲುಕ್ಸಾನು, ಇನ್ನೊಂದು ಕಡೆ ಹೊರೆಯಾಗಿದೆ. ಆದ್ದರಿಂದ ಈ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡಬೇಕೆಂಬುದನ್ನು ಮಂತ್ರಿವರ್ಯರೂ ಮತ್ತು ಮಾನ್ಯ ಸದಸ್ಯರೂ ಹೇಳಬೇಕು. ಈ ಕಾನೂನನ್ನು ಕೂಡಲೇ ಮುಂದುವರಿಸಿ ಈ ಕಾನೂನಿನಿಂದಾಗುವ ತೊಂದರೆಗಳನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಸಾಮಾನ್ಯವಾಗಿ 10 ವರ್ಷದೊಳಗಿರತಕ್ಕ ರಾಸುಗಳನ್ನು ಯಾರೂ ಕಡಿಯಕೂಡದೆಂದು ಮಾಡಿದರೆ ಸಾಕೆಂದು ಕಾಣುತ್ತದೆ. ಈ ವಿಷಯವನ್ನು ಹೈದರಾಬಾದು, ನಾಗಪುರ, ಡೆಲ್ಲಿ, ಮುಂತಾದ ಅನೇಕ ಕಡೆಗಳಲ್ಲಿ ನಾನು ವಿಚಾರಿಸಿದೆ. ಅವರ ಅಭಿಪ್ರಾಯದಲ್ಲಿ ಎಲ್ಲಿಯವರೆಗೆ ಈ ಕಾನೂನನ್ನು ನಾವು ಸರಿಪಡಿಸುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಆರ್ಥಿಕ ಸ್ಥಿತಿ ಸರಿಯಾಗುವುದಿಲ್ಲ. ಅಲ್ಲಿಯವರೆಗೆ ನಮ್ಮ ದೇಶದಲ್ಲಿ ಡೈರಿ ಫಾರಂಗಳ ಸ್ಥಿತಿ ಉತ್ತಮಗೊಳ್ಳುವುದಿಲ್ಲ ಎಂದು ಹೇಳಿದರು. ಆದ್ದರಿಂದ ನಾವಿದನ್ನು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಬೇಕು. ಇದರಿಂದ ನಮ್ಮ ಆರ್ಥಿಕ ಸಂಪತ್ತಿಗೆ ಹೇಗೆ ಕುಂದುಕ ಬರುತ್ತಿದೆ, ಅದನ್ನು ಯಾವ ರೀತಿ ನಿವಾರಿಸಬೇಕೆಂದು ಆಲೋಚಿಸಬೇಕೆಂದು ನಮ್ಮ ಮಂತ್ರಿ ವರ್ಗದವರಿಗೆ ಹೇಳುತ್ತೇನೆ.

ಮಾನ್ಯ ಸ್ನೇಹಿತರು ಯೋಚನೆ ಮಾಡಬೇಕಾದ ಇನ್ನೊಂದು ವಿಷಯವೇನೆಂದರೆ, ಹತ್ತಾರು ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿರುವಾಗ ನಮ್ಮ ಮಹಾಜನರ ಜೀವನದ ಮಟ್ಟವನ್ನು ಉತ್ತಮಪಡಿಸಲಿಕ್ಕೆ ಗಮನ ಕೊಡುವುದಲ್ಲದೆ, ಪ್ರತಿಯೊಬ್ಬರೂ ನಿರ್ಭಯವಾದ ರೀತಿಯಲ್ಲೂ ಮತ್ತು ಶಿಸ್ತಿನಿಂದ ಕೂಡಿದವರಾಗಿಯೂ ಮುಂದುವರಿಯಬೇಕಾದರೆ, ಮುಂದೆ ಜನರಿಗೆ ಈ ಬಾಧೆಗಳಿಲ್ಲದೆ ಇರಬೇಕಾದರೆ ಒಂದು ಸರಿಯಾದ ಶಿಕ್ಷಣ ಕೊಡಬೇಕಾದ್ದು ನಮ್ಮ ಆದ್ಯ ಕರ್ತವ್ಯವೆಂದು ಹೇಳುತ್ತೇನೆ. ಈ ವಿಷಯದಲ್ಲಿ ಸ್ವಲ್ಪ ಸೂಕ್ಷ್ಮವಾಗಿ ನಮ್ಮ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಇಂದು ನಮ್ಮ ಬಂಗಾಳದ ಪರಿಸ್ಥಿತಿ ಏನು !! ನಮ್ಮ ದೇಶದಲ್ಲಿ ಇಂದಲ್ಲ ನಾಳೆಯಾದರೂ ಅಂಥ ವಿಪತ್ತು ಬರಬಹುದು. ಅಂಥ ಸಂದರ್ಭದಲ್ಲಿ ಆ ಪರಿಸ್ಥಿತಿಯನ್ನು ಎದುರಿಸಿ ನಿಲ್ಲುವ ಹಾಗೆ ಎಲ್ಲರನ್ನೂ ತರಬೇತು ಮಾಡಬೇಕು. ಇದಕ್ಕೆ ಮುಖ್ಯವಾಗಿ ಎರಡು ಮೂರು ಹೆಜ್ಜೆ ನಾವು ಮುಂದಿಡಬೇಕಾಗಿದೆ. ಏನೆಂದರೆ, ನಮ್ಮ ಸ್ಕೂಲು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಪರಸ್ಪರ ಭೇದ ಭಾವಗಳು ಭಿನ್ನಾಭಿಪ್ರಾಯಗಳು ಬೆಳೆಯಲು ಅವಕಾಶ ಕೊಡದೆ ಎಲ್ಲರಲ್ಲೂ ಒಂದು ಶಿಸ್ತನ್ನು ಬೆಳೆಸಬೇಕು. ಹೀಗೆ ಮಾಡಿದರೆ ದೇಶದಲ್ಲಿ ಎಲ್ಲರೂ ಒಗ್ಗಟ್ಟಾಗುವುದಕ್ಕೆ ಸಹಾಯವಾಗುತ್ತದೆ. ಎರಡನೆಯದಾಗಿ, ಇದುವರೆಗೂ ಯಾವ ಉಪೇಕ್ಷೆ ಮತ್ತು ಹೇಡಿತನ ನಮ್ಮಲ್ಲಿದೆಯೋ ಅದು ಹೋಗುವಂತೆ ಮಾಡಬೇಕಾದರೆ ಪ್ರತಿಯೊಬ್ಬ ಹುಡುಗ ಹುಡುಗಿಗೂ ಶಿಸ್ತನ್ನು ಕಲಿಸಬೇಕು. ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯೂ ಕೂಡ ಕೆಲವು ಕಾಲ ಸೇವಾದಳ ಕ್ಯಾಂಪಿನಲ್ಲಿ ವಾಸಮಾಡಬೇಕು. ಇದರಿಂದ ನಮ್ಮ ಹುಡುಗರಲ್ಲಿ ಒಗ್ಗಟ್ಟಿನ ಮನೋಭಾವ ಬೆಳೆಸುವುದಕ್ಕೆ ಅವಕಾಶವಾಗುತ್ತದೆ. ಸರ್ಕಾರದವರು ಇದಕ್ಕೆ ಗಮನಕೊಡಬೇಕೆಂದು ಹೇಳುತ್ತೇನೆ.

ಇಷ್ಟೇ ಅಲ್ಲ, ಸಾಮಾನ್ಯ ಜನರಿಗೂ ಕ್ಷಾತ್ರ ತೇಜಸ್ಸು ಬರಬೇಕು. ಜನರಲ್ಲಿ ಐಕಮತ್ಯ, ಒಗ್ಗಟ್ಟು ನೆಲಸಬೇಕು. ಅದಾಗಬೇಕಾದರೆ, ಭಿನ್ನತೆ ದೂರವಾಗಬೇಕಾದರೆ ಕೊನೆಯ ಪಕ್ಷ ಒಂದು ವರ್ಷಕ್ಕೆ ಎರಡುವಾರಗಳಾದರೂ ಇವರುಗಳು ಒಂದು ಕ್ಯಾಂಪಿನಲ್ಲಿರಬೇಕು; ಮಿಲಿಟರಿ ಶಿಕ್ಷಣ ಕೊಡಬೇಕು, ಹಾಗೆ ಮಾಡದೇ ಇದ್ದರೆ ಜನಜೀವನದಲ್ಲಿ ನವಚೈತನ್ಯ ಬಾರದೆ ದುಡ್ಡು ಮಾತ್ರ ಖರ್ಚಾಗಿ ನಮ್ಮ ದೇಶ ಇದ್ದ ಹಾಗೆಯೇ ಅದರ ಪಾಡಿಗೆ ಅದು ಇರುತ್ತದೆ. ಈ ಎರಡು ಮುಖ್ಯ ಕೆಲಸಗಳೂ ನೆರವೇರಿದರೆ ಜನ ಜೀವನದಲ್ಲಿ ಮನೋ

ಭಾವನೆಯು ಬದಲಾವಣೆಯಾಗಿ ಒಗ್ಗಟ್ಟು ಹೆಚ್ಚುತ್ತದೆ. ಈಗ ಮಂತ್ರಿಗಳು ಎಷ್ಟೋ ಕೆಲಸವನ್ನು ಮಾಡಿದ್ದರೂ ಸಹ ಇನ್ನೂ ಏನೂ ಮಾಡಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಅದಕ್ಕೆ ಕಾರಣ ತಿಳಿದುಕೊಳ್ಳುವುದಕ್ಕೆ ಶಕ್ತಿಯಿಲ್ಲದಿರುವುದು. ಆದ್ದರಿಂದ ಸಹಕಾರ ನೀಡುವುದಕ್ಕೆ ಶಕ್ತಿಯಿಲ್ಲ. ಈ ದೋಷಗಳೂ ಪರಿಹಾರವಾದರೆ ಸರ್ಕಾರದವರು ಮಾಡುವ ಪ್ರಯತ್ನಗಳಿಗೆ ಸಹಕಾರ ನೂರು ಪಾಲು ಸಿಕ್ಕಿ ದೇಶವು ಬೆಳೆಯುವುದಕ್ಕೆ ಅವಕಾಶವಾಗುತ್ತದೆ.

ತೆರಿಗೆ ವಿಚಾರ ತೆಗೆದುಕೊಂಡರೆ ಇದು ತೆರಿಗೆ ಹಾಕುವ ಕಾಲವಲ್ಲವೆಂದು ಹೇಳಬೇಕಾಗಿದೆ. ಸರ್ಕಾರದ ಮನಸ್ಸಿನಲ್ಲಿ ಈ ವಿಚಾರದ ಅರಿವಿದ್ದಾಗ್ಯೂ ಮೂರು ನಾಲ್ಕು ಚಿಕ್ಕ ಚಿಕ್ಕ ತೆರಿಗೆಗಳನ್ನು ವಿಧಿಸುವ ಕಾನೂನುಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅದರಲ್ಲಿ ಮೊದಲನ ಮೂರು ಐಟಂಗಳ ವಿಚಾರ ಮಾಡಬೇಕಾಗಿಲ್ಲ. ಆದರೆ ಬೇಳೆಗಳು (pulses) ಮತ್ತು ಡಿಪೋಗಳು—ಇವುಗಳ ಮೇಲೆ ಹಾಕಬೇಕೆಂದಿರುವ ತೆರಿಗೆ ವಿಚಾರ ಪರಿಶೀಲಿಸಬೇಕಾಗಿದೆ. ಬೇಳೆಗಳ ಮೇಲೆ ತೆರಿಗೆ ಹಾಕುವುದು ಸೂಕ್ತವೇ ಅಲ್ಲ. ಆದರೆ ಡಿಪೋ ಛಾರ್ಜಿನ ವಿಚಾರದಲ್ಲಿ ಧರ್ಮ ದೃಷ್ಟಿಯಿಂದ ನೋಡುವುದಾದರೆ ಸ್ವಲ್ಪ ಭಿನ್ನಾಭಿಪ್ರಾಯ ಬಂದರೂ ಬರಬಹುದು. ನಾಲ್ಕಾರು ವರ್ಷಗಳಿಂದ ರಿಯಾಯಿತಿ ಕೊಟ್ಟು, ಈ ವರ್ಷ ಅಥವಾ ಮುಂದೆ ತೆರಿಗೆ ಹಾಕುವುದು ಸೂಕ್ತವಲ್ಲ. ಸರ್ಕಾರದವರು ಮಾಡಿರುವ ಖರ್ಚನ್ನು—ನಷ್ಟವನ್ನು ಭರ್ತಿಮಾಡಿಕೊಳ್ಳಲು ತೆರಿಗೆ ಹಾಕುವುದರಲ್ಲಿ ನ್ಯಾಯವು ಕಂಡುಬರುತ್ತದೆ. ಆದರೆ ಒಂದೆರಡು ವರ್ಷದಲ್ಲಿ ಸರ್ಕಾರಿ ಡಿಪೋಗಳನ್ನು ಮುಚ್ಚಬೇಕಾಗಿ ಬರುತ್ತದೆ. ಆದ್ದರಿಂದ ಇದಕ್ಕೆ ಕಾನೂನು ತರುವುದು ಸೂಕ್ತವಲ್ಲ, ತಂದಿರುವುದನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಅರಿಕೆ ಮಾಡುತ್ತೇನೆ.

ಕಂಟ್ರೋಲ್ ವಿಚಾರದಲ್ಲಿ ನಮಗೆ ಕೆಲವು ತೊಂದರೆಗಳಾಗುತ್ತಿವೆ. ಅಲ್ಲದೆ ಅಲ್ಲ ಸಲ್ಲದ ಕಂಟ್ರೋಲುಗಳು ಬಹಳ ಜಾಸ್ತಿಯಾಗಿವೆ. ಈ ದಿವಸ ಸಕ್ಕರೆಯ ಮೇಲೆ ಕಂಟ್ರೋಲನ್ನು ತೆಗೆದರೂ ಬಹುಶಃ ಯಾರಿಗೂ ತೊಂದರೆಯಿಲ್ಲ. ಅನೇಕ ವರ್ಷಗಳಿಂದ ಸಕ್ಕರೆಗೆ ರಕ್ಷಣೆಯಿದ್ದರೂ, ಈ ದಿವಸ ಕೂಡ ಸಕ್ಕರೆಯ ಮೇಲೆ ಹತೋಟಿ ಮತ್ತು ರಕ್ಷಣೆಯಿದ್ದರೂ ಬೆಲ್ಲದ ಧಾರಣೆ ಮತ್ತು ಸಕ್ಕರೆ ಧಾರಣೆ ಎರಡೂ ಹೆಚ್ಚಿ ವಿಶೇಷ ತೊಂದರೆಯಾಗಿದೆ. ಇದಕ್ಕೆ ಹತೋಟಿಯೇ ಕಾರಣ.

ಸಿಮೆಂಟ್ ವಿಚಾರ ಹೇಳುವುದಾದರೆ ಅದರ ಮೇಲೆ ಕಂಟ್ರೋಲ್ ಏಕೆ ಇಟ್ಟರು ಎಂದು ಕೇಳಬೇಕಾಗಿದೆ. ಕಬ್ಬಿಣ ಮತ್ತು ಉಕ್ಕಿನ ಮೇಲೆ ಕಂಟ್ರೋಲ್ ತೆಗೆಯಬೇಕೆಂದಿದ್ದಾರೆ, ಅದೇ ರೀತಿಯಲ್ಲಿ ಸಿಮೆಂಟಿನ ಕಂಟ್ರೋಲನ್ನೂ ತೆಗೆಯಬೇಕು.

ಕೊನೆಯದಾಗಿ, ಹಿಂಡಿ ವಿಚಾರದಲ್ಲಿರುವ ತೊಂದರೆಯನ್ನು ಸೂಚಿಸುತ್ತೇನೆ. ಹಿಂದೂಸ್ಥಾನದಲ್ಲಿ ಎಲ್ಲೂ ಕೂಡ ಇದಕ್ಕೆ ನಿರ್ಬಂಧವಿಲ್ಲ; ಕಂಟ್ರೋಲಿಲ್ಲ. ಹೀಗಿದ್ದರೂ ಇಲ್ಲಿ ಸರ್ಕಾರದವರು ಮಾಡಿಕೊಂಡಿರುವ ಯೋಜನೆಗಳಿಂದ ನಮ್ಮ ಜನ ಸಾಮಾನ್ಯರಿಗೆ ತೊಂದರೆಯಾಗಿದೆ. ಸರ್ಕಾರದವರು ಇದನ್ನು ಡಿಪೋ ಇಟ್ಟು ಹಂಚುವುದಕ್ಕೆ ಸಾಧ್ಯವಿಲ್ಲ. ದನಗಳು ಹೆಚ್ಚಾಗಿರುವ ನಮ್ಮ ದೇಶದಲ್ಲಿ ಹಿಂಡಿಯು ಯಥೇಷ್ಟವಾಗಿ ಸಿಕ್ಕಬೇಕು. ಆದರೆ ಹಾಗೆ ಸಿಕ್ಕುತ್ತಿಲ್ಲ. ನಮ್ಮ ದೇಶದಲ್ಲಿ ಬೇಕಾದಷ್ಟು ಹಿಂಡಿಯಿದೆ. ಆದ್ದರಿಂದ ಕಂಟ್ರೋಲ್ ತೆಗೆದರೆ ಜನರಿಗೆ ನೆಮ್ಮದಿಯೂ ಆಗುತ್ತದೆ; ಕಾಳ ಸಂತೆಯೂ ಬಹಳವಾಗಿ ಕಡಮೆಯಾಗುತ್ತದೆ. ಇಷ್ಟು ಹೇಳಿ ನಾನು ಮಾಡಿರುವ ಸಲಹೆಗಳಿಗೆ ಸರ್ಕಾರದವರು ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟಿಯವರು (ಹಾಸನ ಜಿಲ್ಲೆ).—ಸ್ವಾಮಿ, ನಾನು ನಮ್ಮ ಮಾನ್ಯ ಕೈಗಾರಿಕಾ ಸಚಿವರಾದ ಶ್ರೀಮಾನ್ ದಾಸಪ್ಪನವರು ಮಂಡಿಸಿರತಕ್ಕಂಥ ಈ ಬಡ್ಜೆಟ್ಟನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಒಬ್ಬ ಸಣ್ಣ ವ್ಯಾಪಾರಸ್ಥನ ದೃಷ್ಟಿಯಿಂದ ಇದು ಯಾವ ರೀತಿಯಿದೆಯೆಂಬುದನ್ನು ಹೇಳಲು ಬಯಸುತ್ತೇನೆ. ಹಿಂದೆ ಜವಾಬ್ದಾರಿ ಸ್ಥಾನದಲ್ಲಿದ್ದು ಮಂತ್ರಿಗಳಾಗಿದ್ದವರು ಬಡ್ಜೆಟ್ ವಿಚಾರದಲ್ಲಿ ಅನಾವಶ್ಯಕವಾಗಿ ಟೀಕೆ ಮಾಡುತ್ತಿದ್ದುದನ್ನು ನೋಡಿ ನನಗೆ ಘಾಬರಿಯಾಯಿತು. ಜನ ಸಾಮಾನ್ಯರು ಹೇಗೆಂದು ತಿಳಿದಾರು? ಇವರು ಮಹಾತ್ಮಾಗಾಂಧಿ ಹೈಡ್ರೊ ಎಲೆಕ್ಟ್ರಿಕ್ ಕೆಲಸವನ್ನು ಪ್ರಾಯಶಃ ಪ್ರಾರಂಭ ಮಾಡಿರಬಹುದು. ಪ್ಲಾನು ಹಾಕಿದ್ದ ಮಾತ್ರಕ್ಕೇ ದುಡ್ಡು ಖರ್ಚುಮಾಡಿ ಕಟ್ಟಡ ಕಟ್ಟಬೇಡವೆ? ಅದಕ್ಕೆ ಪ್ರಜಾ ಸರ್ಕಾರ ಬಂದ ಮೇಲೆ 5–6 ಕೋಟಿ ರೂಪಾಯಿಗಳಷ್ಟು ಹೆಚ್ಚಾಗಿ ಖರ್ಚಾಗಿದೆ. ಅದೂ ಅಲ್ಲದೆ ಇನ್ನೂ 4 ಕೋಟಿ ರೂಪಾಯಿಗಳು ಬೆಲೆ ಬಾಳುವಷ್ಟು ಆಹಾರಧಾನ್ಯಗಳು ದಾಸ್ತಾನಿನಲ್ಲಿವೆ. ಭದ್ರಾವತಿಯಲ್ಲಿ ಸ್ಟೀಲ್ ಫರ್ನೇಸ್ ವಗೈರೆ ಕೆಲಸ ಮಾಡಲು ಕೋಟ್ಯಾಂತರ ರೂಪಾಯಿಗಳ ಖರ್ಚಾಗಿದೆ. ಸಂಬಳದ ಸ್ಕೇಲುಗಳನ್ನು ಹಿಂದೆ ಹೆಚ್ಚು ಮಾಡಿದ್ದರೂ ಈಗ ರೆಕರಿಂಗ್ ಖರ್ಚಿಗಾಗಿ ವರ್ಷಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳವರೆಗೆ ಹೆಚ್ಚಿಗೆ ಕೊಡಬೇಕಾಗಿದೆ. ಅಲ್ಲದೆ ಸಂಬಳದ ಸ್ಕೇಲುಗಳಿಗೆ ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಟ್ಟಿದ್ದರಿಂದ ನಾನ್ ರೆಕರಿಂಗ್ ಖರ್ಚು, ತುಟ್ಟಿ ಭತ್ಯ ವಗೈರೆ ಕೊಡುವುದಕ್ಕಾಗಿ 1½ ಕೋಟಿ ರೂಪಾಯಿಗಳವರೆಗೆ ಹೆಚ್ಚಿತು. ಹೀಗಾಗಿ ಒಟ್ಟಿನಲ್ಲಿ ಸುಮಾರು 12 ಕೋಟಿ ರೂಪಾಯಿಗಳಷ್ಟು ಹೆಚ್ಚಾಗಿ ಖರ್ಚಾಗಿದೆ. ಇದಕ್ಕೆಲ್ಲಾ ಹಣ ಎಲ್ಲಿಂದ ಬರಬೇಕು? ಈಗ ರಿಸರ್ವ್‌ನಲ್ಲಿ ಕೊಟ್ಟಿರಬಹುದು. ಹಾಗೆ ಮಾಡಿದ ಮಾತ್ರಕ್ಕೇ ಗಂಟು ಹೋಗಲಿಲ್ಲ. ಬಂಡವಾಳ ಹೆಚ್ಚಾಗಿರುತ್ತೆ. ಬಂಡವಾಳ ನಮ್ಮ ದೇಶದಲ್ಲಿ ಇನ್ನೂ ಹೆಚ್ಚಿದೆ ಎಂದು ಧೈರ್ಯವಾಗಿ ಹೇಳಬಹುದು. ಆ ದೃಷ್ಟಿಯಿಂದ ನೋಡಿದರೆ ಸರ್ಕಾರದವರು ಧೈರ್ಯದಿಂದ ಮುಂದೆ ಹೋಗಿದ್ದಾರೆ.

ಆ ಮೇಲೆ ಹಿಂದೆ ಸಾಲ ಮಾಡಿದಾಗ ಒಂದಕ್ಕೆ ಹತ್ತರಷ್ಟು ಬಂತು ಎಂದು ಹೇಳಿದರು. ಈಗ ಮಾನ್ಯ ಮಂತ್ರಿಗಳನ್ನು ಅನಾವಶ್ಯಕವಾಗಿ ಟೀಕೆ ಮಾಡಬೇಕಾಗಿಲ್ಲ. ಈಗಲೂ ಜನರು ಪ್ರಜಾ ಸರ್ಕಾರ ಸಾಲ ಕೇಳಿದರೆ, ಒಂದಕ್ಕೆ ಇಪ್ಪತ್ತರಷ್ಟು ಕೊಡುವುದಕ್ಕೆ ಸಿದ್ಧರಾಗಿದ್ದಾರೆಂದು ಘಂಟಾ ಘೋಷವಾಗಿ ಹೇಳುತ್ತೇನೆ. ಇದೂ ಅಲ್ಲದೆ ಜನಾಬ್ ಇಮಾಂರವರು ತಾವು ಎಷ್ಟೋ ಮಾಡಿದ್ದರೆಂದೂ, ಈಗ ಏನೂ ಮಾಡಿಲ್ಲವೆಂದೂ ಹೇಳುವಾಗ ಯಾವ ಉದ್ದೇಶದಿಂದ ಹೇಳಿದರೋ ಗೊತ್ತಿಲ್ಲ. ಅಂಥ ಜವಾಬ್ದಾರಿ ಸ್ಥಾನದಲ್ಲಿದ್ದ ಮಂತ್ರಿಗಳು ಇಂಥ ಅನಾವಶ್ಯಕವಾದ ಟೀಕೆ ಮಾಡಿ ಜನರನ್ನು ಬೆದರಿಸಬಾರದು.

ಇನ್ನು ನಮ್ಮ ಮುಂದೆ ಮಂಡಿಸಿರುವ ಬಡ್ಜೆಟ್ಟನ್ನು ನೋಡೋಣ. ಈಗ ದ್ವಿದಳಧಾನ್ಯಗಳಿಗೆ ಸೇಲ್ಸ್ ಟ್ಯಾಕ್ಸ್ ಹಾಕಬೇಕೆಂದು ಸಚಿವರು ಹೇಳಿದ್ದಾರೆ. ಅದನ್ನು ದಯವಿಟ್ಟು ಪುನರ್ವಿಮರ್ಶೆ ಮಾಡಬೇಕು, ಖಂಡಿತ ಹಾಕಕೂಡದು ಎಂದು ಹೇಳಬೇಕಾಗಿದೆ. ಏಕೆಂದರೆ ಈ ಧಾನ್ಯಗಳನ್ನು ಕೊಳ್ಳುವವರಿಗೆ ಅನಾವಶ್ಯಕವಾದ ತೊಂದರೆಯಾಗುತ್ತದೆ. ಆಮೇಲೆ ಡಿಪೋ ಛಾರ್ಜು ಎಂದು 20 ಲಕ್ಷ ರೂಪಾಯಿಗಳನ್ನು ತೋರಿಸಿರುವುದಕ್ಕೆ ಯೋಚನೆ ಮಾಡಬೇಕಾಗಿಲ್ಲ.

ಬೇಕಾದರೆ ಅದಕ್ಕೆ ಸಲಹೆ ಕೊಡಲು ಸಿದ್ಧವಾಗಿದ್ದೇನೆ. ಆದ್ದರಿಂದ ಹೊಸದಾಗಿ ಹಾಕಬೇಕೆಂದಿರುವ ಈ ಎರಡು ತೆರಿಗೆಗಳನ್ನೂ ತೆಗೆದು ಬಿಡಬೇಕೆಂದು ವಿನಂತಿ ಮಾಡುತ್ತೇನೆ.

ಈಗಿನ ಆಹಾರಾಭಾವಕ್ಕೆ ನಾನಾ ಕಾರಣಗಳಿವೆಯೆಂದು ಹೇಳುತ್ತಾರೆ. ನಾನು ಕೆಲವು ಮುಖ್ಯ ಕಾರಣಗಳನ್ನು ಹೇಳುತ್ತೇನೆ. ದಯವಿಟ್ಟು ನನ್ನ ಮಾತನ್ನು ಆಲಿಸಬೇಕು. ಕೆಲವು ರಚನಾತ್ಮಕ ಸಲಹೆಗಳನ್ನು ಕೊಡುತ್ತೇನೆ. ಈಗ ಸರ್ಕಾರದವರು ದೊಡ್ಡದೊಡ್ಡ ಕೈಗಾರಿಕೆಗಳನ್ನು ವಿಕೇಂದ್ರೀಕರಣ ಮಾಡುತ್ತೇವೆಂದು ಬಡ್ಜೆಟ್ ಭಾಷಣದಲ್ಲಿ ಹೇಳಿರುತ್ತಾರೆ. ಇದು ಬಹು ಮುಖ್ಯವಾದುದು. ದೊಡ್ಡ ಪಟ್ಟಣಗಳಾದ ಮೈಸೂರು, ಬೆಂಗಳೂರು ಭದ್ರಾವತಿ ಮುಂತಾದ ಕಡೆ ದೊಡ್ಡ ದೊಡ್ಡ ಕೈಗಾರಿಕೆ ಕೇಂದ್ರಗಳನ್ನು ಮಾಡುತ್ತಿದ್ದಾರೆ. ಇದರಿಂದ ವ್ಯವಸಾಯ ಮಾಡುತ್ತಿದ್ದ ಅನೇಕ ಬಡಜನರು ಈ ಸ್ಥಳಗಳಿಗೆ ಬಂದು ನೆಲಸುತ್ತಿದ್ದಾರೆ. ಹಳ್ಳಿಯವರು ತಮಗೆ ಕೂಲಿ ಹೆಚ್ಚಾಗಿ ಸಿಕ್ಕುತ್ತದೆಂದು ಇಲ್ಲಿಗೆ ಬರುತ್ತಿರುವುದರಿಂದ ಹೆಚ್ಚು ಬೆಳೆ ಬೆಳೆಯುವ ಯೋಜನೆಯು ವಿಫಲವಾಗುವುದಕ್ಕೆ ಕಾರಣವಾಗಿದೆ. ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದ ಪ್ರಕಾರ ಹಳ್ಳಿಗಳ ಕಡೆ ಸರ್ಕಾರ ಹೆಚ್ಚು ಗಮನ ಕೊಡಬೇಕು. ಕಾರ್ಖಾನೆಗಳನ್ನು ಹೆಚ್ಚು ಮಾಡುವುದರಿಂದ ಒಂದು ರೀತಿಯಲ್ಲಿ ದೇಶದ ಆರ್ಥಿಕ ಸ್ಥಿತಿ ಉತ್ತಮವಾಗೊಂಡರೂ ಬೇರೆ ರೀತಿಯಲ್ಲಿ ಇದರಿಂದ ದೇಶಕ್ಕೆ ತೊಂದರೆಯಾಗುತ್ತದೆ. ದಯೆಯಿಟ್ಟು ಮಾನ್ಯ ಮಂತ್ರಿಗಳು ಈ ಕಡೆ ಗಮನ ಕೊಡಬೇಕೆಂದು ಕೋರುತ್ತೇನೆ. ನೆನ್ನೆಯ ದಿನ ಕಾಳಸಂತೆಯ ವಿಚಾರ ಬಂದಾಗ ಅದನ್ನು ತಪ್ಪಿಸಲು ಮಾನ್ಯ ಸದಸ್ಯರು ನಾನಾ ಸಲಹೆಗಳನ್ನು ಕೊಟ್ಟರು. ನಾನು ವ್ಯಾಪಾರಗಾರನಾದುದರಿಂದ ನನ್ನ ದೃಷ್ಟಿಯಿಂದ ಹೇಳುತ್ತೇನೆ. ವ್ಯಾಪಾರಗಾರರು ಈ ರೀತಿ ಮಾಡುವುದು ಸರಿಯೆಂದು ನಾನು ಹೇಳುವುದಿಲ್ಲ. ಲಾರಿಗಳು ಬಂದ ಮೇಲೆ ಲಾರಿ ಗಟ್ಟಲೆ ಪದಾರ್ಥಗಳನ್ನು ಕಾಳಸಂತೆಯಲ್ಲಿ ವ್ಯಾಪಾರ ಮಾಡಲು ಅವಕಾಶವಾಗಿದೆ. ಲಾರಿಗಳಲ್ಲಿ ಸಾಮಾನುಗಳನ್ನು ಸಾಗಿಸುವವರು ಪ್ರಭಾವಶಾಲಿಗಳಾದ ಜನರು , ಬಡವರು ಮಾಡುವುದಿಲ್ಲ ಈ ಪ್ರಭಾವ ಶಾಲಿಗಳು ಕಾಳಸಂತೆ ವ್ಯಾಪಾರ ಮಾಡಿ ಯಾರ ಕೈಗೂ ಸಿಕ್ಕದೆ ನುಣಚಿಕೊಳ್ಳುತ್ತಾರೆ. ಇದನ್ನು ತಪ್ಪಿಸಲು ನಾನೊಂದು ಸಲಹೆ ಕೊಡುತ್ತೇನೆ. ಇಂಥವರ ಲಾರಿಗಳನ್ನು ಹಿಡಿದು ಸರ್ಕಾರಕ್ಕೆ ವಶಪಡಿಸಿಕೊಳ್ಳಬೇಕು. ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲದಿದ್ದರೆ ಮುಂದಾದರೂ ಇಂತಹ ಒಂದು ಕಾನೂನು ಮಾಡಿ, ಸಿಕ್ಕಿದ ತಕ್ಷಣವೇ ಈ ಲಾರಿಗಳನ್ನು ವಶಪಡಿಸಿಕೊಂಡರೆ, ಈ ವ್ಯಾಪಾರನಿಲ್ಲುತ್ತದೆ.

ಅಲ್ಲದೆ ಇನ್ನೊಂದು ವಿಚಾರ. ನನಗೆ ತಿಳಿದ ಮಟ್ಟಿಗೆ ಲಂಚ ನಿರೋಧ ಇಲಾಖೆಯವರು ಯಾವ ವಿಷಯದಲ್ಲಾದರೂ ಕ್ರಮ ತೆಗೆದುಕೊಳ್ಳಬೇಕಾದರೆ, ಮೊದಲೇ ಪೋಲೀಸಿಗೆ ವರ್ತಮಾನ ಕೊಟ್ಟು ಬರುತ್ತಾರೆ. ಆಯಾ ಸ್ಥಳದ ಡಿ. ಎಸ್. ಪಿ. ಗೆ ಗೊತ್ತಾಗುತ್ತದೆ. ಹೀಗೆ ಮಾಡಬಾರದು. ಯಾರಿಗೂ ಮೊದಲೇ ವರ್ತಮಾನ ಕೊಡದೆ ಅನಿರೀಕ್ಷಿತವಾಗಿ ಬರಬೇಕು.

ಮಾರಾಟದ ತೆರಿಗೆ ಬೊಂಬಾಯಿನಲ್ಲಿ ವರ್ತಕರಿಗೆ single point ಇದೆ. ಈ ರೀತಿ single point ಹಾಕಿದರೆ ಕೊಡಲು ಜನರು ತಯಾರಾಗಿರುತ್ತಾರೆ. ಇದರಿಂದ ಹೆಚ್ಚು ವರಮಾನ ಬರುವುದಿಲ್ಲವೆಂದು ತಿಳಿಯಬಾರದು. ಹೀಗೆ ಮಾಡುವುದರಿಂದ ಮೂರು ಕಾಸು ತೆರಿಗೆ ಹಾಕುವುದಕ್ಕೆ ಬದಲು ಆರುಕಾಸು ಅಥವಾ ಒಂದಾಣೆ ಹಾಕಿದರೂ ಕೊಡಲು ಸಿದ್ಧವಾಗಿದ್ದಾರೆ. ಮಣಕ್ಕೆ ಎರಡುವರೆ ರೂಪಾಯಿ ಬೆಲೆಯಿದ್ದ ಕಡಲೆಕಾಯಿ ಎಣ್ಣೆ ಈಗ 20 ರೂಪಾಯಿ ಆಗಿರುವಾಗ ರೂಪಾಯಿಗೆ ಅರ್ಧ ಆಣೆಯಂತೆ ಹಾಕಿದರೂ ಕೂಡ 10ಆಣೆ ಯಾಗುತ್ತದೆ, ಹೆಚ್ಚೇನೂ ಆಗುವುದಿಲ್ಲ. 20ರೂಪಾಯಿಗೆ ಬದಲು $20\frac{1}{2}$ ರೂಪಾಯಿ ಆಗುತ್ತದೆ. ಆದಕಾರಣ ಬಡವರು ಉಪಯೋಗಿಸತಕ್ಕ ಎಣ್ಣೆ, ಸಕ್ಕರೆ ಮುಂತಾದವುಗಳಿಗೆ ಈ ಮಾರಾಟ ತೆರಿಗೆ ವಿನಾಯಿತಿ ಕೊಟ್ಟರೂ ಒಳ್ಳೆಯದೇ. ನ್ಯಾಯವಾಗಿ ವ್ಯಾಪಾರ ಮಾಡುವ ವರ್ತಕರು ಈ ತೆರಿಗೆಯನ್ನು ಕೊಟ್ಟು ವ್ಯಾಪಾರ ಮಾಡಬೇಕಾಗಿದೆ. ಲಾರಿಗಟ್ಟಲೆ ತರುವವರು ಕಾಳಸಂತೆಯಲ್ಲಿ ಮಾರುತ್ತಾರೆ. ಇದಕ್ಕೆ ಹೆಚ್ಚು ನಿಗಾ ಕೊಡಬೇಕು. ಇದನ್ನು ಮಾಡಿದರೆ ಇದರಿಂದ ಉತ್ಪತ್ತಿ ಇನ್ನೂ ಜಾಸ್ತಿಯಾಗುತ್ತದೆ. ಈಗಾಗಲೇ ಇದರ ಉತ್ಪತ್ತಿ ಒಂದು ಕೋಟಿ ರೂಪಾಯಿವರೆಗೆ ಇದೆ. Single point ಮಾಡಿದರೆ ಸುಮಾರು ಎರಡು ಕೋಟಿಯಷ್ಟಾದರೂ ಅವಕಾಶವಾಗುತ್ತದೆ.

ಆಹಾರದ ವಿಷಯದಲ್ಲಿ ಕೆಲವು ಸಲಹೆಗಳನ್ನು ಕೊಡಬೇಕೆಂದಿಚ್ಛಿಸುತ್ತೇನೆ. ನಮ್ಮ ಸರ್ಕಾರದವರು ಈ ವಿಷಯದಲ್ಲಿ ಭಾರತ ಸರ್ಕಾರಕ್ಕೆ ಸಲಹೆ ಕೊಡಲು ಅವಕಾಶವಿದೆ. Smuggling ಏಕೆ ನಡೆಯುತ್ತದೆಂದರೆ, ಗಡಿಯಿಂದಾಚೆ ಹೆಚ್ಚಿನ ಬೆಲೆಯಿರುವುದೇ ಇದಕ್ಕೆ ಕಾರಣ. ಉದಾಹರಣೆಗೆ, ಸಕ್ಕರೆ ಮಂಗಳೂರಿನಲ್ಲಿ ಮೂಟೆಗೆ 300 ರೂಪಾಯಿ ಬೆಲೆಯಿತ್ತು, ಆದರೆ ಇಲ್ಲಿ ಮಾತ್ರ 100 ರೂಪಾಯಿ ಇತ್ತು. ಇದರಿಂದ ಲಾರಿಗಳಲ್ಲಿ ಹೊರಕ್ಕೆ ಸಾಗಿಸಿ ಕಾಳಸಂತೆಯ ಧಾರಣೆಗೆ ಮಾರುತ್ತಿದ್ದರು, ಇಡೀ ಭಾರತದಲ್ಲಿ ಎಲ್ಲಾ ಕಡೆಯೂ ಆಹಾರ ಪದಾರ್ಥಗಳಿಗೆ ಒಂದೇ ಧಾರಣೆ ಮಾಡಿದರೆ ಒಂದು ಕಡೆಯಿಂದ ಹೀಗೆ ಇನ್ನೊಂದು ಕಡೆ ಹೋಗುವುದೇ ಇಲ್ಲ. ಒಂದು ವೇಳೆ ಸ್ವಲ್ಪ ವ್ಯತ್ಯಾಸವಿದ್ದರೂ ಕೂಡ ಸಾಗಿಸುವುದಕ್ಕೆ ಖರ್ಚಾಗುತ್ತದೆ. ಆದುದರಿಂದ ಸಾಗಿಸಲು ಎಷ್ಟು ಖರ್ಚಾಗುತ್ತದೆಯೋ ಅಷ್ಟು ಮಾತ್ರ ವ್ಯತ್ಯಾಸವಿದ್ದರೂ ಕಳ್ಳತನದಲ್ಲಿ ಸಾಗಿಸುವುದಿಲ್ಲ. ಈಗ ಆಹಾರ ಇಲಾಖೆಯಲ್ಲಿ ಸಿಬ್ಬಂದಿಗಾಗಿ ಬೇಕಾದಷ್ಟು ಖರ್ಚು ಮಾಡುತ್ತಿದ್ದಾರೆ. ಆದಕಾರಣ ದರಗಳ ಹತೋಟಿ ಮಾಡಿ ಆ ಇಲಾಖೆಯನ್ನು ತೆಗೆದುಬಿಡಬಹುದು. ಯಾರು ಹೆಚ್ಚಿನ ದರದಲ್ಲಿ ಮಾರುತ್ತಾರೋ ಅಂಥವರಿಗೆ ಉಗ್ರವಾದ ಶಿಕ್ಷೆ ಕೊಟ್ಟರೆ, ಈ ರೀತಿಯ ಕಾನೂನು ಮಾಡಿದರೆ ಯಾರೂ ಹೆಚ್ಚು ಧಾರಣೆಗೆ ಮಾರಲು ಪ್ರಯತ್ನ ಪಡುವುದಿಲ್ಲ. ಸಾಹುಕಾರರೂ ಹೆದರುತ್ತಾರೆ, ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಉಳಿಯುತ್ತದೆ.

ಇನ್ನು ಪೋಲೀಸ್ ಇಲಾಖೆಯನ್ನು ನೋಡಿದರೆ, ಈಚೆಗೆ ಈ ಇಲಾಖೆ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಏಕೆಂದರೆ, ಅವರವರ ಕರ್ತವ್ಯವನ್ನು ಅವರು ಸರಿಯಾಗಿ ಮಾಡುತ್ತಿಲ್ಲವೆಂದು ಅನೇಕ ಕಾರಣಗಳಿಂದ ಹೇಳಬೇಕಾಗಿದೆ. ಮಾನ್ಯ ಗೃಹಸಚಿವರು ಇದನ್ನು ಸರಿಪಡಿಸುತ್ತಾರೆಂದು ಭಾವಿಸಿದ್ದೇನೆ.

ಐದು ಜಿಲ್ಲೆಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ. ಆದರೆ ಈಗ ಪಾನನಿರೋಧ ಜಾರಿಯಲ್ಲಿಲ್ಲದೇಯಿರುವ ಜಿಲ್ಲೆಗಳ ಸ್ಥಿತಿ ಶೋಚನೀಯವಾಗಿದೆ. ಈ ಜಿಲ್ಲೆಗಳಿಗೆ ಬೇರೆ ಜಿಲ್ಲೆಗಳಿಂದ ಜನರು ಬಂದು ಕುಡಿಯುತ್ತಿದ್ದಾರೆ. ಹಿಂದೆ ಸರಬರಾಯಿ ಮಾಡಬೇಕಾದರೆ ಒಂದು ಹತೋಟಿ ಅಥವಾ ಮಿತಿ ಇಟ್ಟುಕೊಂಡು ಸರಬರಾಯಿ ಮಾಡುತ್ತಿದ್ದರು. ಆದರೆ ಈಗ ಅದನ್ನು ತೆಗೆದಿದ್ದಾರೆ. ಅಲ್ಲದೆ ಹತ್ತಾಣೆಯಿದ್ದುದನ್ನು ಆರಾಣೆಗೆ ಇಳಿಸಿದ್ದಾರೆ. ಇದರಿಂದ ಕುಡಿಯದೇ

ಇರುವವರು ಕೂಡ ಕುಡಿಯಲು ಕಲಿತು ಸಾಯಂಕಾಲದ ವೇಳೆಯಲ್ಲಿ ಮಾರುವ ಕಡೆ ತಿರುಗುತ್ತಿರುತ್ತಾರೆ. ಕುಡಿಯುವ ಅಭ್ಯಾಸವಿರುವವರು ಈಗ ಇದನ್ನು ಹೆಚ್ಚು ಮಾಡುತ್ತಿದ್ದಾರೆ. ಆದುದರಿಂದ ಬಾಕಿ ನಾಲ್ಕು ಜಿಲ್ಲೆಗಳಲ್ಲಿಯೂ ಪಾನನಿರೋಧವನ್ನು ಜಾರಿಗೆ ತಂದರೆ ಒಳ್ಳೆಯದು. ಈ ವರ್ಷವೇ ಇನ್ನೊಂದೆರಡು ಜಿಲ್ಲೆಗಳಲ್ಲಾದರೂ ಜಾರಿಗೆ ತಂದರೆ ತುಂಬಾ ಅನುಕೂಲವಾಗುತ್ತದೆ.

ಇನ್ನೊಂದು ವಿಚಾರ. ಮಾನ್ಯ ಮಂತ್ರಿಗಳು ಬೇರೆ ಬೇರೆ ಸ್ಥಳಗಳಿಗೆ, ಇಲಾಖೆಗಳಿಗೆ ಬರಬೇಕಾದರೆ ಅನಿರೀಕ್ಷಿತವಾಗಿ ಬರಬೇಕು. ಆಗ ಲೋಪದೋಷಗಳು ಅವರಿಗೆ ಗೊತ್ತಾಗುತ್ತದೆ. ಮುಂಚೆಯೇ ತಾವು ಬರುವ ವರ್ತಮಾನ ಕೊಟ್ಟುಬಿಟ್ಟರೆ ಅಧಿಕಾರಿಗಳು ಎಲ್ಲವನ್ನೂ ಸರಿಪಡಿಸಿರುತ್ತಾರೆ. ಯಾವ ನ್ಯೂನತೆಗಳೂ ಸರಿಯಾಗಿ ಗೊತ್ತಾಗುವುದಿಲ್ಲ. ಸರ್ಕಾರದವರು ಈಗ ನಮ್ಮ ಸಹಕಾರವನ್ನು ಅಪೇಕ್ಷೆ ಪಡುತ್ತಿದ್ದಾರೆ. ನಮ್ಮ ಕೈಲಾದ ಸಹಕಾರವನ್ನು ಕೊಡಲು ಸಿದ್ಧರಾಗಿದ್ದೇವೆ. ಆದಕಾರಣ ನಮ್ಮ ಸಲಹೆಗಳಿಗೆ ಅವರು ಪುರಸ್ಕಾರ ಕೊಟ್ಟು ನಿಷ್ಪಕ್ಷಪಾತವಾಗಿ ಎಲ್ಲ ವಿಚಾರಗಳನ್ನೂ ಪರಿಶೀಲನೆ ಮಾಡಬೇಕು.

ನಮ್ಮ ಮುಸ್ಲಿಂ ಸಹೋದರರಿಗೆ ನನ್ನದೊಂದು ಸಲಹೆಯಿದೆ. ಏನೆಂದರೆ, ಮೈನಾರಿಟೀಸ್ ಆದ ನಾವು ಇಲ್ಲಿ ಸುಖವಾಗಿದ್ದೇವೆಂದು ಅವರೇ ಹೇಳಿದ್ದಾರೆ. ಅವರ ಕರ್ತವ್ಯವನ್ನು ಅವರೂ ಮಾಡಬೇಕೆಂದು ನನ್ನ ಸಲಹೆ. ಈಗ ಪೂರ್ವಬಂಗಾಳದಲ್ಲಿ ಮೈನಾರಿಟಿ ಪಂಗಡದವರಿಗೆ ತುಂಬಾ ತೊಂದರೆಯಾಗುತ್ತಿದೆ. ಈ ಸಂದರ್ಭದಲ್ಲಿ ಇಲ್ಲಿನ ಮುಸ್ಲಿಮರು, ಪ್ರಭಾವಶಾಲಿಗಳಾಗಿರುವವರು ಅಲ್ಲಿಗೆ ನಿಯೋಗ ಹೋಗಿ ಇಲ್ಲಿ ತಾವು ಸುಖ ಶಾಂತಿಯಿಂದಿದ್ದೇವೆಂದೂ, ಅವರೂ ಅಲ್ಲಿನ ಮೈನಾರಿಟಿಗಳನ್ನು ಸುಖವಾಗಿಟ್ಟುಕೊಂಡರೆ, ಇಲ್ಲಿನ ಮೈನಾರಿಟೀಸ್‌ಗೆ ಸೌಕರ್ಯವಾಗುತ್ತದೆ, ಇಲ್ಲದಿದ್ದರೆ ತೊಂದರೆಯಾಗುತ್ತದೆಂದೂ ಪ್ರಚಾರ ಮಾಡಿದರೆ ಬಹಳ ಉಪಕಾರ ಮಾಡಿದ ಹಾಗಾಗುತ್ತದೆ. ಈ ಸಲಹೆಯನ್ನು ಅವರ ಹಿತದೃಷ್ಟಿಯಿಂದಲೇ ಅವರು ಪರ್ಯಾಲೋಚನೆಮಾಡಬೇಕು.

Janab MOHAMED HANIEF.—Are we going to be in trouble if we do not go?

Sri H. B. GUNDAPPA GOWDA.—You are guaranteed protection in India.

Janab MOHAMED HANIEF.—Hindustan or Pakistan national, it is the duty of all the Governments to protect all.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಈ ಭೀತಿ ಇರಬಾರದು. ನಾವು ಒಳ್ಳೆಯ ಕೆಲಸ ಮಾಡುತ್ತಿದ್ದೇವೆಂದು ತಿಳಿದುಕೊಂಡು ಅವರು ಹೋಗಬೇಕು. ನಮ್ಮ ಹೊಳೆನರಸೀಪುರದಲ್ಲಿ ಹಿಂದೂ ಮುಸ್ಲಿಮರಿಗೆ ಯಾವ ಭೇದವೂ ಇಲ್ಲದೆ ನಾವು ಅಣ್ಣ ತಮ್ಮಂದಿರಂತೆ ಇದ್ದೇವೆ. ಈ ನನ್ನ ಸಲಹೆಗೆ ಖಂಡಿತವಾಗಿ ಪುರಸ್ಕಾರ ಕೊಟ್ಟು ಅಲ್ಲಿಗೆ ಹೋದರೆ ದೇಶದಲ್ಲಿ ಶಾಂತಿ ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮಹಾತ್ಮಾ ಗಾಂಧಿಯವರು ಹಿಂದೆ ಗಲಾಟೆಯಾಗುತ್ತಿದ್ದ ಕಾಲದಲ್ಲಿ ತಮ್ಮ ಪ್ರಾಣದ ಮೇಲಿನ ಹೆದರಿಕೆಯನ್ನು ಬಿಟ್ಟು ಹೋಗಲಿಲ್ಲವೇ ! ಅವರ ಮೇಲ್ಪಂಕ್ತಿಯನ್ನು ಅನುಸರಿಸಬೇಕು. ಕೊನೆಯದಾಗಿ, ನನಗೆ ಇಷ್ಟು ಕಾಲ ಇಲ್ಲಿ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನರ್ಪಿಸುತ್ತೇನೆ.

Sri G. A. ACHARYA (Bangalore District—General).—Mr. Speaker, I am sorry the Hon'ble Member Janab Mahomed Imam is not here. He has faced us with a volley of questions and I hope I will answer them. He said: "You cannot get money in the open market; how are you going to face the future; what are the channels of securing funds; Do you believe you can raise money in the open market; how are you going to complete the existing capital works; how are you going to balance the future Budgets? You are spending more and earning less;" I will answer these in my own language. I tell him that we the people of Mysore (I am sorry Janab Imam is not here) will produce more goods. We will earn more and save more. We will part our savings to Government. We will lend to our Government to increase generation of electric power and to increase production using power and thereby improve the standard of living. This will bring us more revenue. Are we not spending on social services? We are creating work. We can increase all-round production by improved machinery. What is money? Money is wealth. Who produces it? It is the people. Wealth has to be produced. You cannot simply dig. Who produces wealth? It is the people again. What will the present Government do? They will, in my opinion, create opportunities and facilities. Through these we are going to carry on. We have made people feel that they are doing it. They are in everything that we do.

Another thing is that Janab Mahomed Imam spoke very damagingly—I intensely feel for his remarks—about our credit in the open market. People look to your instruments of production and not to mere securities alone. Whenever we speak on finances we must restrain ourselves. In the end Janab Mahomed Imam said that it was only a constructive criticism. You know that in the financial market credit is everything and therefore it is better that we are not terrified at the figures given in the Budget. We must not talk loosely; we must take them, study

them and see how the money has been spent; how we got that money and where the money has gone. Let people study this with an open mind.

It is true, from the reading of the Budget from the year 1936 to 1947, that the past Governments hoarded money. You know now-a-days that hoarders of wealth are treated with contempt. If money were to be kept in one place without putting it to use, naturally those people are treated with contempt. Individual money is different from that of Government money.

Janab J. MAHOMED IMAM.—Contempt only by communists.

Sri G. A. ACHARYA.—Even by the capitalists. Money must be moving so that it may produce more money. That is my conception of finance. Janab Mahomed Imam was lecturing, if I may say so, as to the ways of Budget making. But he forgot that what he had learnt was only through books. Book learning is not useful sometimes. As a matter of fact the present policy of the Government of Mysore, if I read them correctly, is to create more and more opportunities and facilities all over the State so that people somehow or other may produce something, may sell something and thereby they can live by earning. Without instruments nobody can produce. As a matter of fact, we have hands and legs. Sometimes even they cannot produce more. The Hon'ble the Finance Minister has, in his Budget speech, referred to mechanised industries. I may tell the Hon'ble Members and the Government also that is the Japanese way, and not the American way, that we should introduce or adopt to increase all-round production.

The Hon'ble Finance Minister has more or less referred to India's economy and he has almost covered the sectors and aspects of our economic life. Many of my friends also have talked about it. I shall restrict myself by referring to the production of wealth in Mysore and how we can raise the standard of living. It is not with mere lip sympathy that the Mysore Government are talking in terms of common man. Everybody knows it. If there is any Government to-day which is anxious to do all-round good to the country, it is perhaps the present Ministry. By this I do not simply pay compliment to the Ministry and say that all they are doing is good. I am not of that type. I shall come back to what I said about the Japanese ways of producing and increasing the manufacture of goods of utility. I was telling you about the American way because a reference has been made that recently our Government have come into alliances with American firms like the General Electric Company or Westinghouse. Whatever it may be, for Mysore's economy it is very necessary that we must depute as many students as possible to Japan to get to know their ways of 'know how' blue prints working. Because from morning till evening we require goods which can be produced in Mysore. After all what is it that a man requires from morning till evening? He requires money. He requires comforts like food, cloth and shelter. He has to pay for these comforts and he has to earn money to purchace those comforts. That is economy. In this respect I lay emphasis on the point that to improve the economic condition of workers of Mysore the Japanese way of manufacturing goods is best suited. I was surprised when I visited Delhi recently to find that with a small machinery with a quarter horse power a man was able to produce much. It is not that I condemn huge machinery. It is not so. But in Mysore we find mostly villages. If each man in Mysore were to produce three rupees worth of goods for a day I do not think we will have to go about with a begging bowl.

Sri H. C. DASAPPA.—I would like to draw the attention of the Hon'ble Member to the allotment we have made for deputation of officers and non-officials to foreign countries for studies, which comes under Sericulture which means studies in Japan.

Sri G. A. ACHARYA.—I am not bothered about that. I have looked into the figures and if the Hon'ble Minister thinks that what he has done is much more than what I have asked for let him satisfy himself. This is the first time I am speaking on the Budget and if I am disturbed the trend of my entire thoughts will be lost because I am not a politician. After all the

Hon'ble Minister for Finance has proved himself to be a good negotiator during this integration affair. In fact, I forgot to pay a compliment to him. In Delhi especially, if I can reveal, it is learnt that he can get things done quickly by his convincing arguments.

Mr. SPEAKER.—By his interruption the Minister got the Hon'ble Member's compliment. (Laughter).

Sri G. A. ACHARYA.—What was due to him was forgotten. By his interference he got my compliment because he has proved as a good negotiator, or to put the phraseology of salesmanship, a good salesman of Mysore. He knows how to sell our own products. He knows what is good for Mysore and he knows how to get things done.

So from that angle I pay my compliment to him. I am coming again to that point in referring to the production of wealth. Just tell me if 35 lakhs of people in Mysore and the rest, the women, were to earn one rupee or two somehow or other at any cost by doing any work how much wealth we will produce? Out of 12 months, 3 or 4 months are spent in agriculture and what are they to do afterwards? The future economy of India can be built on hard work. I believe personally that if each man and woman were not to work, the future is gloomy. Work, hard work, is what is wanted.

Now I come to the American ways. Certain references have been made about REMCO and so on and so forth. Only the other day when I was telling that a Committee was to be appointed, our able Finance Minister said 'We have intelligence here. We have technology. Our own people have made a thorough fundamental research and they are well up'. Whatever that be, here is a question of foreign alliance. To-day it may sound very good. Let me be understood that I am not objecting to coming into alliance with Billion Dollars Corporations. It is only in order to give an idea to our Finance Minister as to the monopolistic tendency of those concerns with whom we deal, because it is the Government of Mysore that are coming into contact with the Billion Dollars Corporations. My only fear is that it is better that we slow down the starting of new industries. By this, let me not be understood that I am advocating no more industries, no more company promotions. No. We are coming in contact with a Billion Dollars Corporation of America. The American ways of business, the American ways of building their finances, the American ways of monopoly, are quite different from those of ours. Whatever it is, I will take it for granted that whatever negotiations we have now done, it may be it is good for Mysore, but still there is a suspicion lurking in our minds that it is better that we are careful in coming into closer contact with these Corporations. Study well. Know more about them. Then decide. With this I go to my next point.

Mr. SPEAKER.—The Hon'ble Member has got two or three minutes more.

Sri G. A. ACHARYA.—Yes, Sir, I will finish.

From a study of the budget figures of the past six years which I have already mentioned, I like the "risk-taking mentality" of the Government of Mysore, because without taking risks, you will not succeed. Sometimes we have to take risks for the good of the people. As a matter of fact take all the events that have happened during these years. I want those people who object to our spending so much money to recall to their minds the several difficulties that we have faced. Sometimes communalists went to such an extent that minorities have been duly protected. What that costs Government, nobody knows. As a matter of fact, the whole nation was in danger. I for one do not object the past Ministry also. It may be defective planning on their part as it seems to me to-day, but that I do not object because they were prosperous, they were getting more revenue then. Generally, when people are prosperous they do not care especially when they make plans. They planned and we have executed them. So I am not one of those who accuse the past Ministry or the present Ministry. I know this much that whatever money they have put in on capital works it will give us good dividends. I do not regret and I am

not one of those who believe in money being kept idle. It must work, circulate and it must produce. Only this much I can say, that sometimes on the capital amount for construction work we have spent so far we may not be able to get rich dividends. The other day the Law Minister—the Law Minister is not here—was referring that we are earning 20 per cent. I think those days have gone. There can be no question of our earning 20 per cent at the cost of people. Let not Government think of high profits.

I would like to refer to the new taxation policy. Whenever they raise the electricity charges, it amounts almost to a tax on raw material. This is a tax on industry. ನಮ್ಮ ಜುಟ್ಟು ಅವರ ಕೈಯಲ್ಲಿರುವುದರಿಂದಲೂ ಮತ್ತು ಅವರೇ ಎಲ್ಲಾ ಕೆಲಸಗಳನ್ನೂ ಮಾಡುತ್ತಿರುವುದರಿಂದಲೂ, ಅವರು ಏನು ಬೇಕಾದರೂ ಮಾಡಬಹುದು! Government own the power-supply they control the power, they control so many things. What I am afraid of is this, that if people are to suspect that anything that Government does, is costly and anything that private enterprise does is cheap, then the trouble comes and I for one believe that it is not advisable at present to increase rates on electricity because that is a raw material for small industries and for big industries.

With these few words, I congratulate the present Ministry for their getting rid of "fear complex". Sometimes, fear complex is so much that it leads to indecision on their part. The Minister thinks that a certain policy is good, but he refuses to give way and act because of fear complex. Let Ministers get rid of this mentality. I only hope that this fear complex is turned out. So let them dare to face whatever the difficulties that come, because they know what they have done is to elevate the condition of the masses.

Thank you, Sir.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ನಾನು ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಮಹಮದ್ ಇಮಾಂರವರು—ನಾನು ಅವರಿಗೆ ಶ್ರೀಮಾನ್ ಎಂತಲೇ ಉಪಯೋಗಿಸುತ್ತೇನೆ ಜನಾಬ್ ಎಂದು ಹೇಳುವುದಿಲ್ಲ, ಕಾರಣವೇನೆಂದರೆ, ಹಿಂದಿನಿಂದಲೂ ನನಗೂ ಮತ್ತು ಅವರಿಗೂ ಇರತಕ್ಕ ಸಲಿಗೆಯ ಮೇಲೆ ನಾನು ಅವರನ್ನು ಮೊದಲಿಂದಲೂ, ಹಿಮ್ಮಣ್ಣ, ಹಿಮ್ಮಣ್ಣ ಎಂದೇ ಕರೆಯುವ ವಾಡಿಕೆ—ಭಾಷಣ ಮಾಡುತ್ತಿದ್ದಾಗ ಬಹಳ ತೀವ್ರಾಸಕ್ತಿಯಿಂದ ಎಲ್ಲವನ್ನೂ ಕೇಳಿದೆನು. ಕಾರಣವೇನೆಂದರೆ, ಅವರು ವಿರೋಧಪಕ್ಷದ ನಾಯಕರು, ಏನಾದರೂ ತಪ್ಪುಗಳಿದ್ದರೆ ಅವರ ದೃಷ್ಟಿಕೋಣಕ್ಕೆ ಬೀಳಬಹುದು, ಅದರ ಮೇಲೆ ಅವರು ಏನಾದರೂ ರಚನಾತ್ಮಕ ಟೀಕೆಗಳನ್ನು ಮಾಡಬಹುದು ಎಂಬುದಾಗಿ. ಆದರೆ ಕೊನೆಗೆ ನೋಡಿದ್ದರಲ್ಲಿ ಅವರ ಭಾಷಣದಲ್ಲಿ ಏನೂ ತಿರುಳಿಲ್ಲ. ಅವರ ಭಾಷಣದಲ್ಲೆಲ್ಲಾ ತಿಳಿಸಿರುವುದು, ಅವರು ಮಂತ್ರಿಗಳಾಗಿದ್ದಾಗ ಏನೇನು ಮಾಡಿದರೆಂಬುದನ್ನು ಹೇಳುತ್ತಾ, ಈಗಿನ ಮಂತ್ರಿಮಂಡಲ ಏನೂ ಕೆಲಸ ಮಾಡಿಲ್ಲ ಎಂಬುದಾಗಿ. ಅಷ್ಟು ಹೊರತಾಗಿ ಮತ್ತೆ ಯಾವ ಬಾಬನ್ನೇಲೂ ಅವರು ರಚನಾತ್ಮಕಟೀಕೆಯನ್ನು ಮಾಡಿರುವುದಿಲ್ಲ. ಹೀಗೆ ಅವರಿಗೆ ಸುಮಾರು ಒಂದು ಘಂಟೆಯ ಕಾಲ ಭಾಷಣ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಾಗ್ಯೂ, ಅವರು ಬಡ್ಜೆಟ್ಟಿನ ಪರವಾಗಿ ಸರಿಯಾಗಿ ವಿಮರ್ಶೆಮಾಡಿ ಭಾಷಣಮಾಡದಿದ್ದುದಕ್ಕೆ ವಿಷಾದಪಡಬೇಕಾಗಿದೆ.

ಆದರೆ ನಾನು ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಹೇಳದೆ ವಿಧಿಯಿಲ್ಲ. ಈಗಿರತಕ್ಕ ನಮ್ಮ ಸರ್ಕಾರದವರು ಎಷ್ಟು ಜಾಣ್ಮೆಯಿಂದ, ಎಷ್ಟು ಬುದ್ಧಿವಂತಿಕೆಯಿಂದ ಈ ಆಯವ್ಯಯ ಪಟ್ಟಿಯನ್ನು ತಯಾರಿಸಿದ್ದಾರೆಂಬುದರ ಬಗ್ಗೆ ನಿಜವಾಗಿಯೂ ನಾವೆಲ್ಲರೂ ಹೆಮ್ಮೆಪಡತಕ್ಕದ್ದಾಗಿದೆ. ಇದಕ್ಕಾಗಿ ನಾನು ಈಗಿನ ಮಂತ್ರಿಮಂಡಲವನ್ನು ಅಭಿನಂದಿಸಬೇಕಾಗಿದೆ. ಈಗ ನಮ್ಮ ಮುಂದಿರುವ ಬಡ್ಜೆಟ್ಟಿನಲ್ಲಿ ಈಗಿನ ಮಂತ್ರಿಮಂಡಲದವರು ಸ್ಪೆಷಲ್ ರಿಜರ್ವ್‌ಗಳಿಂದ ಹೆಚ್ಚು ಹಣವನ್ನು draw ಮಾಡದ ರೀತಿಯಲ್ಲಿ, ಹೊಸ ಹೊಸ ತೆರಿಗೆಗಳನ್ನು ಹೆಚ್ಚಾಗಿ ಹಾಕದೆಯೂ ಸರ್ಕಾರಕ್ಕೆ ಹಣದ ಉತ್ಪತ್ತಿ ಹೆಚ್ಚುವಂತೆ ಮಾಡಿದ್ದಾರೆ. ಇದು ನಿಜವಾಗಿಯೂ ಜಾಣ್ಮೆಯ ಕೆಲಸವೇ ಹೌದು. ಹೀಗೆ ತೆರಿಗೆಯನ್ನು ವಿಧಿಸಿರುವುದರಲ್ಲಿ ಕೆಲವನ್ನು ಸಣ್ಣ ಸಣ್ಣ ಬಾಬುಗಳ ಮೇಲೂ ಮತ್ತೆ ಕೆಲವನ್ನು ದೊಡ್ಡ ದೊಡ್ಡ ಬಾಬುಗಳ ಮೇಲೂ ವಿಧಿಸಿದ್ದಾರೆ. ಹಾಗೆ ತೆರಿಗೆಯನ್ನು ವಿಧಿಸಿರುವ ಕೆಲವು ಐಟಂಗಳ ಪೈಕಿ ಬೆಟ್ಟಿಂಗ್ ಟ್ಯಾಕ್ಸ್ ಎಂಬುದೂ ಸಹ ಒಂದಾಗಿದೆ. ಇದನ್ನು ಸರ್ವರೂ ಸ್ವಾಗತಿಸುತ್ತಿದ್ದಾರೆ. ಈ ಬೆಟ್ಟಿಂಗ್ ಎಂಬ ದುಷ್ಟ ಪದ್ಧತಿ ನಿರ್ಮೂಲವಾಗಬೇಕಾಗಿದ್ದರೆ ಇದೂ ಒಂದು ಮಾರ್ಗ. ಆದ್ದರಿಂದ ಇದರ ಮೇಲೆ ಎಷ್ಟು ಹೆಚ್ಚು ತೆರಿಗೆ ಹಾಕಿದರೂ ಅಷ್ಟೂ ಉತ್ತಮವಾದುದೆಂದು ನಾನು ಇದನ್ನು ಸ್ವಾಗತಿಸುತ್ತೇನೆ.

ಈಗ ತಾವು ಡಿಪ್ರೋ ಚಾರ್ಜ್ ಎಂದು ಹಾಕುತ್ತೇವೆಂದು ಹೇಳಿದ್ದೀರಿ. ನನ್ನ ಸ್ನೇಹಿತರು ಹೇಳಿದ ಹಾಗೆ ಈಗ ತಾವು ಆಹಾರದ ಮೇಲೆ ಎಷ್ಟೋ ಹಣವನ್ನು ಖರ್ಚುಮಾಡುತ್ತಿದ್ದೀರಿ. ಅಷ್ಟು ಖರ್ಚಿನ ಮಧ್ಯೆ ಇದರಿಂದ ಬರತಕ್ಕ ಆದಾಯ ಕೇವಲ ಅಲ್ಪ ಎಂದು ಹೇಳಬೇಕು. ಆದ್ದರಿಂದ ಅವರು ಪುನಃ ವಿಮರ್ಶೆಮಾಡಿ ಈ ತೆರಿಗೆಯನ್ನು ಬಿಟ್ಟುಬಿಡುತ್ತಾರೆಂದು ನಂಬಿದ್ದೇನೆ. ಇದರಿಂದ ಬಹುಶಃ 20 ಲಕ್ಷ ರೂಪಾಯಿಗಳು ಬರಬಹುದೆಂದು ಲೆಕ್ಕ ಹಾಕಿದ್ದಾರೆ. ಕೋಟಿಗಟ್ಲೆ ಸರ್ಕಾರದವರು ಈ ಆಹಾರಕ್ಕಾಗಿಯೇ ಖರ್ಚು ಮಾಡುತ್ತಿರುವಾಗ ಇದನ್ನು ಈಗ ಹೊಸದಾಗಿ ಹಾಕದೆ ಇರುವುದು ಒಳ್ಳೆಯದೆಂದು ನಾನು ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

ಇದೇ ರೀತಿಯಲ್ಲಿ ಈಗ ತಾವು ಸೇಲ್ಸ್ ಟ್ಯಾಕ್ಸ್‌ನಲ್ಲಿ ಕೆಲವು ಪದಾರ್ಥಗಳ ಮೇಲೆ ವಿನಾಯಿತಿ ಕೊಟ್ಟಿರುವುದನ್ನು ತಪ್ಪಿಸಬೇಕೆಂದು ಸೂಚಿಸಿದ್ದೀರಿ. ಬೇಳೆಗಳ ಮೇಲೆ ಇದುವರೆಗೂ ಇದ್ದ ವಿನಾಯಿತಿ ಹೋಗಿ ಅದರ ಮೇಲೂ ಇನ್ನುಮೇಲೆ ಟ್ಯಾಕ್ಸ್ ಬೀಳುವುದಾಗಿದೆ.

ಇದರಿಂದ ಸರ್ಕಾರಕ್ಕೆ ಬರುವ ಹಣವಾದರೋ ಕೇವಲ ಕಡಿಮೆ. ಸುಮಾರು ನಾಲ್ಕೈದು ಲಕ್ಷ ರೂಪಾಯಿಗಳು ಎಂದು ಹೇಳಿದ್ದಾರೆ. ಇದನ್ನು ಬಿಟ್ಟರೆ ಸರ್ಕಾರಕ್ಕೇನೂ ಹೆಚ್ಚಿಗೆ ತೊಂದರೆಯಾಗುವುದಿಲ್ಲ. ಆದ್ದರಿಂದ ಈಗ ತಾವೇನಿದ್ದರೂ ಟೀಕೆ ಮಾಡುವುದಕ್ಕೆ ಆಸ್ಪದ ಕೊಟ್ಟ ಹಾಗಾಗಿದೆಯೇ ಹೊರತು ಮತ್ತೇನೂ ಅಲ್ಲ. ಆದ್ದರಿಂದ ಒಟ್ಟಿನಲ್ಲಿ ಈ ಎರಡು ಬಾಬುಗಳನ್ನು ಬಿಟ್ಟಿದ್ದರೆ ಚೆನ್ನಾಗಿತ್ತೆಂದು ಹೇಳುತ್ತೇನೆ.

ಆಮೇಲೆ, ಒಂದು ವಿಚಾರ ನಾನಿಲ್ಲಿ ಹೇಳದೆ ಇದ್ದರೆ ನಾನು ಕರ್ತವ್ಯಲೋಪ ಮಾಡಿದಂತಾಗುತ್ತದೆಂದು ತಿಳಿಯುತ್ತೇನೆ. ಅದೇನೆಂದರೆ, ಆರ್ಥಿಕ ವಿಲೀನೀಕರಣದ ವಿಷಯ. ಇದರಿಂದ ನಮ್ಮ ದೇಶಕ್ಕೆ ಬಹಳ ನಷ್ಟವಾಗಬಹುದೆಂದೂ, ದೊಡ್ಡ ದೊಡ್ಡ ವರಮಾನದ ಬಾಬುಗಳನ್ನೆಲ್ಲಾ ಇಂಡಿಯಾ ಸರ್ಕಾರದವರು ತೆಗೆದುಕೊಂಡರೆ ನಮ್ಮ ಗತಿಯೇನು, ನಮ್ಮ ಆಯವ್ಯಯವನ್ನು ಇನ್ನು ಮೇಲೆ ಸರಿತೂಗಿಸುವುದು ಹೇಗೆ ಎಂದೂ ಅನುಮಾನವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ಆದರೆ ವಾಸ್ತವವಾಗಿ ನೋಡಿದರೆ, ಇದೊಂದು 10 ವರ್ಷದ ಯೋಜನೆಯಾಗಿ ಅದರಲ್ಲಿ ಮೊದಲನೆಯ 5 ವರ್ಷದಲ್ಲಿ ನಮ್ಮಿಂದ ತೆಗೆದುಕೊಳ್ಳುವುದನ್ನು ಸಂಪೂರ್ಣವಾಗಿ ನಮಗೇ ಕೊಡುವುದಾಗಿಯೂ ಜೊತೆಗೆ ಇತರೆ ಗ್ರಾಂಟುಗಳು ಕೆಲವನ್ನೂ ನಮಗೆ ಪಾವತಿಮಾಡುತ್ತಾರೆಂದೂ ಹೇಳಿದ್ದಾರೆ. ಈ ರೀತಿಯಾದ ಇಂಟೆಗ್ರೇಷನ್ ಯೋಜನೆಯಿಂದ ನಮಗೆ ಯಾವ ರೀತಿಯಲ್ಲೂ ನಷ್ಟವಿಲ್ಲವೆಂದು ಎಲ್ಲರಿಗೂ ಗೊತ್ತಾಗುತ್ತದೆ. ಆದ್ದರಿಂದ ಇಷ್ಟುಮಟ್ಟಿಗೆ ಬುದ್ಧಿವಂತಿಕೆಯಿಂದ ವ್ಯವಹಾರಗಳನ್ನು ನಡೆಸಿದ ನಮ್ಮ ಆರ್ಥಿಕ ಸಚಿವರಿಗೆ ನಾನು ವಂದನೆಗಳನ್ನು ಅರ್ಪಿಸಬೇಕಾಗಿದೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ, ನಮ್ಮ ರಿಸರ್ವ್‌ಗಳು. ಈ ವಿಚಾರದಲ್ಲಿ ಅನೇಕರು ಒಂದು ಸಂದೇಹವನ್ನಿಟ್ಟುಕೊಂಡಿದ್ದಾರೆ. ನಮ್ಮಲ್ಲಿದ್ದ ಅನೇಕ ನಿಧಿಗಳನ್ನು ಈ ಸರ್ಕಾರದವರು ಬಳಸಿಕೊಂಡುಬಿಟ್ಟು ಸರ್ಕಾರದ ಬಂಡವಾಳವನ್ನೆಲ್ಲಾ ಬರಿದುಮಾಡಿದ್ದಾರೆಂದು ಹೇಳಿದರು. ನಮಗೇನಾದರೂ ವಿಪತ್ತು ಬಂದರೆ ಹೇಗಪ್ಪಾ ಎಂದು ಹೇಳಿದರು. ಆದರೆ ನಮ್ಮ ಬಡ್ಜೆಟ್ಟನ್ನು ನೋಡಿದರೆ ಅದಕ್ಕೆಲ್ಲಾ ಸರಿಯಾದ ಕಾರಣಗಳಿವೆಯೆಂದು ಗೊತ್ತಾಗುತ್ತದೆ. ಈಚೆಗೆ ಸಂಬಳದ ಪುನರ್ವಿಮರ್ಶೆಯಾಯಿತು. ಹಿಂದಿನ ಸರ್ಕಾರದವರು ಮಾಡಿದ ಈ ಸಂಬಳದ ಪುನರ್ವಿಮರ್ಶೆಯಿಂದ ಕೋಟ್ಯಾಂತರ ರೂಪಾಯಿಗಳ ಈ ಖರ್ಚನ್ನು ನಾವು ಹೊರಬೇಕಾಗಿ ಬಂತು. ನ್ಯಾಯವಾಗಿ ಈ ಖರ್ಚಿಗೆ ನಾವು ಕಾರಣರಲ್ಲವೆಂದೇ ಹೇಳಬೇಕು. ಆಹಾರ ಪರಿಸ್ಥಿತಿ ಹಿಂದೆ ಈಗಿನಷ್ಟು ಉಲ್ಬಣವಾಗಿರಲಿಲ್ಲ. ಈ ಆಹಾರದ ದುಸ್ಥಿತಿಯಿಂದ ಹೆಚ್ಚು ಹೆಚ್ಚಿಗೆ ಖರ್ಚುಮಾಡಬೇಕಾಗಿ ಬಂದಿದೆ. ಇವುಗಳನ್ನೆಲ್ಲಾ ಪರಿಗಣಿಸಿದರೆ ನಾವು ರಿಸರ್ವ್‌ನಿಂದ ಹಣ ಖರ್ಚುಮಾಡಿರುವುದೇನೂ ತಪ್ಪಲ್ಲವೆಂದು ಹೇಳಬೇಕು. ಹಣವೆಲ್ಲೂ ಹೋಗಿಲ್ಲ. ಅದಕ್ಕಾಗಿ ಯಾವ ಭಯವನ್ನೂ ಪಡಬೇಕಾಗಿಲ್ಲವೆಂದು ಹೇಳುತ್ತೇನೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಕೆಲವು ಸಲಹೆಗಳನ್ನು ಹೇಳಬೇಕೆಂದಿದ್ದೇನೆ. ನಮ್ಮ ಸರ್ಕಾರದವರು ಈ ಬಾಬಿಗಾಗಿ ಖರ್ಚುಮಾಡುತ್ತಿರುವುದನ್ನೂ ಇತರೇ ಸರ್ಕಾರದವರು ಖರ್ಚುಮಾಡುತ್ತಿರುವುದನ್ನೂ ಹೋಲಿಸಿ ನೋಡಿದರೆ, ನಮ್ಮಂತೆ ಮೂರು ಕೋಟಿ ರೂಪಾಯಿಗಳಷ್ಟು ಖರ್ಚುಮಾಡುತ್ತಿರುವ ಪ್ರಾಂತ್ಯವೇ ಇಲ್ಲವೆಂದು ಹೇಳುತ್ತೇನೆ. ಆದರೆ ಒಂದು ವಿಧದಲ್ಲಿ ನೋಡಿದರೆ ನಾವು ಸ್ವಲ್ಪ ಅವಸರ ಅವಸರವಾಗಿ ಸ್ಕೂಲು ಕಾಲೇಜುಗಳನ್ನು ಕೊಟ್ಟಿದ್ದೇವೋ ಎಂದೆನ್ನಿಸುತ್ತದೆ. ಏಕೆಂದರೆ ಕೇಳಿ ಕೇಳಿದಲ್ಲಿ ಸ್ವಲ್ಪ ಮಟ್ಟಿಗೆ cheap popularity ಗಳಿಸಲಿಕ್ಕೋ ಎನ್ನುವ ಹಾಗೆ, ಕೇಳಿದವರಿಗೆಲ್ಲಾ ಸ್ಕೂಲು ಕಾಲೇಜುಗಳನ್ನು ತೆರೆಯುವುದಕ್ಕೆ ಅನುಮತಿ ಕೊಡುತ್ತಿದ್ದೀರಿ. ಆದರೆ ಅನೇಕ ಕಡೆಗಳಲ್ಲಿ ಈ ಸ್ಕೂಲು ಕಾಲೇಜುಗಳಿಗೆ ಸರಿಯಾದ ಕಟ್ಟಡಗಳಿಲ್ಲ. ನಮ್ಮ ಊರಿನಲ್ಲೇ ಒಬ್ಬರು ದೊಡ್ಡ ಮನುಷ್ಯರು ಲಕ್ಷ ರೂಪಾಯಿಗಳನ್ನು ದಾನವಾಗಿ ಕೊಟ್ಟರು. ಆದರೂ ಇದುವರೆಗೂ ಕಟ್ಟಡ ಕಟ್ಟಿಸಿಕೊಟ್ಟಿಲ್ಲವೆಂದು ತಿಳಿಸುವುದಕ್ಕೆ ವಿಷಾದವಾಗುತ್ತದೆ. ಅವರು ಕೊಟ್ಟ ಲಕ್ಷ ರೂಪಾಯಿಗಳೂ ಮತ್ತು ಸಾರ್ವಜನಿಕರು ಕೊಟ್ಟ 25,000 ರೂಪಾಯಿಗಳೂ ಇನ್ನೂ ಡಿಪಾಜಿಟ್‌ನಲ್ಲಿಯೇ ಉಳಿದಿವೆ. ಪ್ಲಾನು ಮತ್ತು ಎಸ್ಟಿಮೇಟು ಆಗಿಬಿಟ್ಟು 4–5 ವರ್ಷಗಳಾದರೂ ಇನ್ನೂ ವ್ಯವಹಾರದಲ್ಲೇ ನಿಂತಿದೆ. ಇದೇ ರೀತಿ ಒಬ್ಬರು ಇಂಜಿನಿಯರಿಂಗ್ ಕಾಲೇಜ್ ಒಂದನ್ನು ಕಟ್ಟಿಸಿಕೊಡಬೇಕೆಂದು 1½ ಲಕ್ಷ ರೂಪಾಯಿಗಳನ್ನು ಕೊಟ್ಟರು. ಇನ್ನೊಬ್ಬರು ಒಂದು ಆಸ್ಪತ್ರೆಗಾಗಿ ಕೊಟ್ಟರು. ಅದನ್ನೂ ಮಾಡಿಲ್ಲ. ಸರ್ಕಾರದವರು ಹೀಗೆ ಕಟ್ಟಡಗಳನ್ನು ಕಟ್ಟಿಸಿಕೊಡದೆ ಇದ್ದರೆ ಆ ಕಾಲೇಜುಗಳನ್ನು ವಜಾಮಾಡುವುದೇ ಒಳ್ಳೆಯದೆಂದು ತೋರುತ್ತದೆ. ಆದ್ದರಿಂದ ಒಂದು ಸಲಹೆಯೇನೆಂದರೆ, ಕಾಲೇಜು ಕೊಟ್ಟರೆ ಅದಕ್ಕೆ ಸರಿಯಾಗಿ ಕಟ್ಟಡ, ಸಲಕರಣೆ ಮುಂತಾದುವುಗಳನ್ನು ಏರ್ಪಾಡು ಮಾಡಿಕೊಡಬೇಕೆಂದು ಹೇಳುತ್ತೇನೆ. ಈಗ ಎಷ್ಟೋ ಹೈಸ್ಕೂಲುಗಳಲ್ಲಿ ಸಾಕಾದಷ್ಟು ಜನ ಉಪಾಧ್ಯಾಯರೇ ಇರುವುದಿಲ್ಲ. ಯಾರೋ ಒಬ್ಬಿಬ್ಬರು ಇರುತ್ತಾರೆ. ಇಂಥಾ ಸ್ಕೂಲುಗಳನ್ನು ಕೊಡುವ ಬದಲು ಸ್ಕೂಲು ಕೊಡದೆ ಇದ್ದರೇ ಒಳ್ಳೆಯದು. ಆಗ ಜನರು 'ಏನೋ ಕೊಡಲಿಲ್ಲ' ಎಂದು ಹೇಳಿಕೊಂಡು ಸುಮ್ಮನಾಗುತ್ತಾರೆ ಅಷ್ಟೆ. ಅದು ಬಿಟ್ಟು ಸ್ಕೂಲು ಕೊಟ್ಟು, ಹೀಗಾದರೆ ಅದು ಸರ್ಕಾರಕ್ಕೆ ಘನತೆ ತರುವುದಿಲ್ಲ. ಆದ್ದರಿಂದ ವಿದ್ಯಾಭ್ಯಾಸವನ್ನು ಹೆಚ್ಚು ಮಾಡಬೇಕೆಂಬ ವಿಷಯದಲ್ಲಿ ಸ್ವಲ್ಪ ಹುಷಾರಿನಿಂದ ಮುಂದುವರಿಯಬೇಕೆಂದು ಹೇಳುತ್ತೇನೆ.

ಆ ಮೇಲೆ, ಪಾನನಿರೋಧದ ವಿಚಾರದಲ್ಲಿ ಸರ್ಕಾರದವರು ಬಹಳ ಜಾಣ್ಮೆಯಿಂದ ವರ್ತಿಸುತ್ತಿದ್ದಾರೆಂದು ಹೇಳಬೇಕು. ಏಕೆಂದರೆ ಈಗ ನಮಗೆ ಬಂದ ಅನುಭವದಲ್ಲಿ ಪಾನನಿರೋಧ ಜಯಪ್ರದವಾಗಲಿಲ್ಲವೆಂದು ಗೊತ್ತಾಗುತ್ತದೆ. ಅನೇಕ ಕಡೆ ಕಳ್ಳಬಟ್ಟಿ ಇಳಿಸುವುದು ನಡೆಯುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ನಿಧಾನವಾಗಿ ಹೋಗತಕ್ಕ ನೀತಿಯನ್ನು ಅನುಸರಿಸುವುದು ಉತ್ತಮ. ಬೇರೆ ಕಡೆಗಳಿಗೆ ಇದನ್ನು ವಿಸ್ತರಿಸುವುದನ್ನು ಸ್ವಲ್ಪಮಟ್ಟಿಗೆ ನಿಧಾನಿಸಬೇಕೆಂದು ತಾವೀಗ ತೀರ್ಮಾನಿಸಿರುವುದು ಬಹಳ ಯೋಚನೆಮಾಡಿ ಮಾಡಿದ ತೀರ್ಮಾನವೆಂದು ಸಂತೋಷದಿಂದ ಹೇಳುತ್ತೇನೆ.

ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ನಾನು ನಮ್ಮ ಅರ್ಥಸಚಿವರಿಗೂ ಮತ್ತು ನಮ್ಮ ಸರ್ಕಾರದವರಿಗೂ ಒಂದು ವಿನಂತಿಮಾಡಿಕೊಳ್ಳುತ್ತೇನೆ. ಈಗ ನಮ್ಮ ಮಿತ್ರರಾದ ಶ್ರೀಮಾನ್ ಸೂರ್ಯನಾರಾಯಣಶೆಟ್ಟರೂ ಮತ್ತು ಇತರ ಸ್ನೇಹಿತರೂ ಹೇಳಿದಹಾಗೆ ಈ ಟ್ಯಾಕ್ಸ್ single point ಮೇಲೆ ಮಾಡಿದರೆ ಉತ್ತಮ. ವರ್ತಕರಿಗೂ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ, ಉಪಯೋಗಿಸುವವರಿಗೂ ಅನುಕೂಲವಾಗುತ್ತದೆ, ಹೆಚ್ಚು ಧಾರಣೆಯೂ ಆಗುವುದಿಲ್ಲ. ಸರ್ಕಾರದವರು ಬೊಂಬಾಯಿ ಸರ್ಕಾರದಲ್ಲಿ ಮಾಡಿರುವಂತೆ ಮತ್ತು ಜಿಲ್ಲಾ ಕಾನ್ಫರೆನ್ಸ್‌ಗಳಲ್ಲಿ ಮಾಡಿರುವ ನಿರ್ಣಯಗಳಂತೆ single point ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಬೇಕೆಂದು ಹೇಳುತ್ತೇನೆ.

ಇನ್ನು ನಾನು ಹೆಚ್ಚಿಗೆ ಕಾಲ ತೆಗೆದುಕೊಳ್ಳುವುದಿಲ್ಲ. ಒಟ್ಟಿನಲ್ಲಿ ಬಹಳ ಜಾಣ್ಮೆಯಿಂದ ಮಾಡಿದ ಬಜೆಟ್ ಇದು. ಇದು ನಮ್ಮ ದೇಶಕ್ಕೆ ಒಂದು ಹೆಮ್ಮೆಯನ್ನು ಉಂಟುಮಾಡತಕ್ಕ ವಿಚಾರವೆಂದು ಹೇಳಿ ನಮ್ಮ ಅರ್ಥ ಸಚಿವರಿಗೂ ಮತ್ತು ಸರ್ಕಾರದವರಿಗೂ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಎಂ. ಸಿ. ವೆಂಕಟೇಶ್ವರರವರು (ಮೈಸೂರು ಜಿಲ್ಲೆ—ನಿಮ್ನ ವಂಗಡ).—ಅಧ್ಯಕ್ಷ ಮಹಾಶಯರೇ, ಅರ್ಥಸಚಿವರು ನಮ್ಮ ಮುಂದೆ ಮಂಡಿಸಿರತಕ್ಕ ಈ ಆಯವ್ಯಯದ ಪಟ್ಟಿಯಲ್ಲಿ ನಮಗೆ ಗೊತ್ತಾಗುತ್ತಿರುವುದೇನೆಂದರೆ ಅವರು ಬಹಳ ಶ್ರದ್ಧೆಯಿಂದ ಈಗಿನ ವಾತಾವರಣವನ್ನು ನೋಡಿಕೊಂಡು ಬಹಳ ಜಾಣ್ಮೆಯಿಂದ ವರ್ತಿಸಿದ್ದಾರೆಂಬುದು. ದೇಶದ ಈಗಿನ ಆದಾಯ ವ್ಯಯಗಳನ್ನೆಲ್ಲಾ ಪರಿಶೀಲಿಸಿ ನಮ್ಮ ದೇಶದ ಅಭ್ಯುದಯಕ್ಕಾಗಿ ಯಾವ ಯಾವ ರೀತಿಯಲ್ಲಿ 'allotment ಮಾಡಬೇಕು ಎಂಬುದನ್ನು ಕೂಲಂಕಷವಾಗಿ ವಿಮರ್ಶಿಸಿ ಇದನ್ನು ಮಾಡಿದ್ದಾರೆಂದು ಕಂಡುಬರುತ್ತದೆ. ಈ ವಿಷಯದಲ್ಲಿ ಈಗ ಮಾತನಾಡಿದ ಎಷ್ಟೋ ಮಂದಿ ಸದಸ್ಯರು ಮುಕ್ತ ಕಂಠದಿಂದ ಇದನ್ನು ಒಪ್ಪಿಕೊಂಡಿದ್ದಾರೆ. ಅದನ್ನೇ ನಾನೂ ಸಹ ಅನುಮೋದಿಸುತ್ತಾ, ಅವುಗಳನ್ನು ಆಚರಣೆಗೆ ತರುವುದರಲ್ಲಿ ಜನರಿಗೆ ಯಾವ ರೀತಿ ಅಲ್ಪಸ್ವಲ್ಪ ತೊಂದರೆಯಿರುವುದನ್ನು ತಿಳಿಸಿ, ಅವುಗಳನ್ನು ಹೇಗೆ ನೆರವೇರಿಸಬಹುದೆಂದು ಒಂದೆರಡು ಮಾತುಗಳಲ್ಲಿ ತಿಳಿಸುತ್ತೇನೆ.

ಈಗ ದೇಶದಲ್ಲೆಲ್ಲಾ ಆಹಾರಕ್ಕಾಗಿ ಹಾಹಾಕಾರವೆದ್ದಿದೆ. ಅದಕ್ಕೆ ಸರ್ಕಾರದವರು ಹೆಚ್ಚು ಹಣ ಖರ್ಚು ಮಾಡಿ ನಾನಾ ಯೋಜನೆಗಳನ್ನು ಮಾಡಿದ್ದಾರೆ. ಆದರೆ ಕೇವಲ ನಾನಾ ಯೋಜನೆಗಳನ್ನು ತಯಾರುಮಾಡಿ ವ್ಯವಸಾಯೋಪಕರಣಗಳು, ಟ್ರ್ಯಾಕ್ಟರುಗಳು, ಮುಂತಾದುವನ್ನು ಸರಬರಾಯಿ ಮಾಡಿದ್ದೇವೆಂದು ವರದಿಯಲ್ಲಿ ಬರೆದ ಮಾತ್ರಕ್ಕೇ ಸಾಲದು. ಏಕೆಂದರೆ ಅವು ಸಾಮಾನ್ಯ ರೈತನಿಗೆ ಸಕಾಲದಲ್ಲಿ ಸಿಕ್ಕಿ ಉಪಯೋಗವಾಗುತ್ತಿಲ್ಲ. ಆದ್ದರಿಂದ ಆ ಉಪಕರಣಗಳು ಸದುಪಯೋಗವಾಗುವಂತೆ ಸಾರ್ವಜನಿಕರಿಗೆ ಸಕಾಲದಲ್ಲಿ ಒದಗಿಸಿ ಹೆಚ್ಚು ಬೆಳೆ ಬೆಳೆಸಿ ದೇಶೋಪಕಾರವಾಗುವಂತೆ ನೋಡಿಕೊಳ್ಳಬೇಕು. ಇದೂ ಅಲ್ಲದೆ ಮುಖ್ಯವಾಗಿ ನಮಗೆ ಬೇಕಾದ ಮಳೆಯು ಈಗ್ಗೆ ಹತ್ತುವರ್ಷಗಳಿಂದೀಚೆಗೆ ಸರಿಯಾಗಿ ಬೀಳದೆ, ಒಂದು ಜೂಜಿನಂತೆ ಆಗುತ್ತಿದೆ. ಕೆಲವು ಕಡೆ ಬರುವುದು ಮತ್ತೆ ಕೆಲವುಕಡೆ ಬಾರದೆ ಇರುವುದು—ಹೀಗಾಗಿ ಬಹಳ ತೊಂದರೆಯಾಗಿದೆ. ಇದಕ್ಕೆ ಕಾರಣ ನಮ್ಮ ಕಾಡುಗಳನ್ನು ಸರಿಯಾಗಿ ಕಾಪಾಡದೇ ಇರುವುದು. ಕಾಡು ಹೆಚ್ಚಾಗಿರುವ ಕಡೆ ಸಾಮಾನ್ಯವಾಗಿ ಮಳೆ ಸಮೃದ್ಧಿಯಾಗಿ ಆಗುತ್ತದೆ. ಅದರಿಂದ ಹೆಚ್ಚು ಬೆಳೆ ಮಾಡಲೂ ಅನುಕೂಲವಿದೆ. ಆದ್ದರಿಂದ ನಮ್ಮಲ್ಲಿರುವ ಕಾಡನ್ನು ನಾವು ಮುತವರ್ಜಿಯಿಂದ ನೋಡಿಕೊಂಡು ಸಾಕಷ್ಟು ಗಿಡ ಮರಗಳನ್ನು ವೃದ್ಧಿಪಡಿಸುತ್ತಾ ಹೋದರೆ ಬೇಕಾದಹಾಗೆ' ಮಳೆಯೂ ಬರುತ್ತದೆ, ಬೆಳೆಯೂ ಆಗುತ್ತದೆ ಎಂಬ ದೃಷ್ಟಿಯಿದೆ.

ಕೈಗಾರಿಕೆ ವಿಚಾರದಲ್ಲಿ ಮಾನ್ಯ ಸದಸ್ಯರನೇಕರು ಬಹಳವಾಗಿ ಮಾತನಾಡಿದ್ದಾರೆ. ನಮ್ಮ ಕೈಗಾರಿಕೆಗಳು ಪ್ರಪಂಚದಲ್ಲಿರುವ ಇತರ ಮುಂದುವರಿದ ದೇಶದ ಕೈಗಾರಿಕೆಗಳ ಮಟ್ಟಕ್ಕೆ ಬಂದು ಬಹಳ ಉನ್ನತ ಸ್ಥಿತಿಯಲ್ಲಿವೆಯೆಂದು ಹೇಳಿದಾರೆ. ಅದನ್ನು ಎಷ್ಟೋ ಧೈರ್ಯದಿಂದ ಅನೇಕರು ಹೇಳಿದ್ದಾರೆ. ಆದರೆ ಕೆಲವು ಕೈಗಾರಿಕೆಗಳು ಕೆಳಮಟ್ಟದಲ್ಲೇ ಇವೆ, ಅದು ಬಹಳ ಶೋಚನೀಯ ವಿಚಾರ ಎಂದು ನಾನು ತಿಳಿಸಬೇಕಾಗಿದೆ. ಹಳ್ಳಿಗಾಡಿನಲ್ಲಿರುವ ಕೈಗಾರಿಕೆಗಳಿಗೆ ಏನು ಅನುಕೂಲತೆ ಕೊಟ್ಟಿದ್ದೀರೆಂದು ನೋಡಿದರೆ ಏನೂ ಇಲ್ಲ ಎಂದು ಹೇಳಬೇಕಾಗಿದೆ. ಜೀವನದಲ್ಲಿ ಹೊಸ ಭಾವನೆಯೇನಾದರೂ ಮೂಡಲು ಅವಕಾಶ ಮಾಡಿದ್ದೀರಾ ಅಥವಾ ಬಂಡವಾಳ ಕೊಟ್ಟಿದ್ದೀರಾ ಅಥವಾ ನಷ್ಟವೇನಿದೆಯೆಂದು ನಿಜವಾಗಿಯೂ ನೋಡಿ ಕೂಲಂಕಷವಾಗಿ ಪರಿಶೀಲಿಸಿದ್ದೀರಾ, ಅದಕ್ಕೆ ಗ್ರಾಂಟು ಏನಾದರೂ ಕೊಟ್ಟಿದ್ದೀರಾ ಎಂದು ವಿಚಾರಮಾಡಿದರೆ ಯಾವುದೂ ಕಂಡುಬರುತ್ತಿಲ್ಲ. ಇನ್ನೊಂದು ವಿಷಯವನ್ನು ಹೇಳುವುದಾದರೆ ಈ ಪ್ರಪಂಚದಲ್ಲಿ ಲಾಭದಾಯಕವಾದ ಕೈಗಾರಿಕೆಯೆಂದರೆ ಹತ್ತಿ ಕೈಗಾರಿಕೆಯನ್ನು ಬಿಟ್ಟರೆ ಚರ್ಮದ ಕೈಗಾರಿಕೆ ಎಂದು ಹೇಳಬಹುದು. ಅದು ನಿಮ್ನ ವರ್ಗದವರಲ್ಲಿ ಮಾತ್ರ ಅಡಕವಾಗಿದೆ. ಈ ಲಾಭದಾಯಕವಾದ ಕೈಗಾರಿಕೆ ಮತ್ತು ದೇಶಕ್ಕೇ ಹೆಚ್ಚಿನ ಪ್ರಗತಿದಾಯಕವಾದ ಕೈಗಾರಿಕೆ ಬಡವರ ಕೈಲಿದೆಯೆಂದರೆ ಅದಕ್ಕೆ ಹೆಚ್ಚಿನ ಉತ್ತೇಜನ ಸರ್ಕಾರದಲ್ಲಿ ಇಲ್ಲದಿರುವುದು ವಿಷಾದಕರ. ಆದ್ದರಿಂದ ಮೈಸೂರು ಸಂಸ್ಥಾನದಲ್ಲಿ ಈ ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ಕೊಡುವಿರೆಂದು ನಂಬಿದ್ದೇನೆ.

ಇನ್ನು ಕೂಲಿಗಾರರ ವಿಷಯದಲ್ಲಿ ಹೇಳುತ್ತಾ ಈಗ ಕಾನೂನೇನೋ ಮಾಡಿದ್ದಾರೆ, ಉಪಕಾರವಾಗುವಂತೆ ಮಾಡಿದ್ದಾರೆ, ಆದರೆ ಹಳ್ಳಿಗಾಡಿನಲ್ಲಿ ವ್ಯವಸಾಯದ ಕೂಲಿಗಳು ಅಥವಾ ಕೈಗಾರಿಕಾ ಕೂಲಿಗಾರರು ಅಥವಾ ಇತರ ತರಹೆ ಕೂಲಿ ಮಾಡುವವರು—ಇವರಿಗೆ ಏನಾದರೂ ಉಪಕಾರವಿದೆಯೆ, ಕಾನೂನಿನಿಂದ ಉಪಕಾರವಾಗುತ್ತಿದೆಯೇ ಎಂದು ನೋಡಿದರೆ ನಿಜವಾಗಿಯೂ ಏನೂ ಆಗುತ್ತಿಲ್ಲ. ಅದಕ್ಕಾಗಿ ಈಗ ವ್ಯವಸಾಯ, ಕೈಗಾರಿಕೆ ಮತ್ತು ಇತರ ಕಡೆಗಳಲ್ಲಿ ಕೆಲಸಮಾಡುವ ಕೂಲಿಗಾರರು ದೇಶದಲ್ಲಿ ಎಷ್ಟು ಜನರಿದ್ದಾರೆಂದು ಅಂಕಿ ಅಂಶ ತೆಗೆದುಕೊಂಡು ಯೋಜನೆ ತಯಾರುಮಾಡಿ ಅವರ ಸ್ಥಿತಿ ಗತಿಗಳು ಉತ್ತಮ ಸ್ಥಿತಿಗೆ ಬರುವಂತೆ ಸರ್ಕಾರದವರು ಯೋಚನೆಮಾಡುತ್ತಾರೆಂದು ನಂಬಿದ್ದೇನೆ. ಹಳ್ಳಿಗಾಡಿನ ಕೂಲಿಗಾರರ ಪರಿಸ್ಥಿತಿ ಈಗಾಗಲೇ ಬಹಳ ಶೋಚನೀಯ ಸ್ಥಿತಿಯಲ್ಲಿದೆ. ಈಗ ಹೊಸ ರಾಜ್ಯಾಂಗದ ಪ್ರಕಾರ 14 ವರ್ಷಗಳ ಕೆಳಗಿರುವ ಹುಡುಗರು ಕೆಲಸ ಕಾರ್ಯದಲ್ಲಿರಬಾರದೆಂದು ನಿರ್ಬಂಧವಿದೆ. ಆದರೆ ಹಳ್ಳಿಗಳ ಕಡೆ ಎಷ್ಟೋ ಮಂದಿ ಹುಡುಗರು ಇದುವರೆಗೆ ದುಡಿಯುತ್ತಿದ್ದಾರೆ. ಅವರಿಗೆ ಬಹಳ ಕಷ್ಟವಾಗುವುದರಿಂದ ಸರ್ಕಾರದವರು ಈ ನಿರ್ಬಂಧವನ್ನು ತಪ್ಪಿಸಿ ಮೊದಲನಂತೆ ಅವಕಾಶ ಮಾಡುತ್ತಾರೆಂದು ನಂಬುತ್ತೇನೆ.

ತಾವೇನೋ ಈಗ ನಿಮ್ನವರ್ಗದವರಿಗೆ 19 ಕ್ಷಲ ರೂಪಾಯಿಗಳನ್ನು ಮಂಜೂರು ಮಾಡಿದ್ದೀರಿ. ಅದರಲ್ಲಿ ಅಕ್ವಿಜಿಷನ್‌ಗೆ, ಭಜನೆ ಮಂದಿರಗಳಿಗೆ, ಸ್ಕೂಲುಗಳಿಗೆ ಮತ್ತು ಇತರ ಬಾಬುಗಳಿಗೆ ಹಣ ವಿನಿಯೋಗವಾಗುತ್ತದೆ. ಅಂದಮೇಲೆ ಮನೆ ಕಟ್ಟಿಕೊಳ್ಳುವುದಕ್ಕೆ ಉಳಿಯುವುದು ಬಹು ಸ್ವಲ್ಪ ಹಣ ಮಾತ್ರ. ಅದು ಸಾಲುವುದಿಲ್ಲ, ಹೆಚ್ಚು ಕೊಡಬೇಕಾಗಿತ್ತು ಎಂಬುದು ನನ್ನ ಅಭಿಪ್ರಾಯ. ಆದರೂ ಹರಿಜನರಿಗೆ ನಿಜವಾಗಿಯೂ ಇದು ಸಂದಾಯವಾಗುತ್ತದೆಯೇ ಎಂದು ಯೋಚನೆಮಾಡಿದರೆ ಇಲ್ಲವೆಂದು ಕಂಡುಬರುತ್ತದೆ. ಕಾರಣವೇನೆಂದರೆ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ತರಹ ಹಂಚಿಕೆಯಿದೆ. ಕೆಲವು ತಾಲ್ಲೂಕುಗಳಲ್ಲಿ ಕಂಟ್ರಾಕ್ಟರುಗಳ ಮೂಲಕ, ಇನ್ನು ಕೆಲವು ಕಡೆ ಸಮಿತಿಯ ಸದಸ್ಯರುಗಳ ಮೂಲಕ, ಹೀಗೆ ನಾನಾ ರೀತಿ ಕೊಡುತ್ತಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ಖರ್ಚು ಆಗುತ್ತಿದೆಯೇ ವಿನಾ ಹರಿಜನರಿಗೆ ಉಪಕಾರವಾಗುತ್ತಿಲ್ಲ. ಇದರಲ್ಲಿ ಗೊಂದಲ ಬಹಳವಾಗಿದೆ. ದೇಶದಲ್ಲಿ ನಾನಾರೀತಿ ವ್ಯವಸ್ಥೆಗಳಿದ್ದು, ಸರಿಯಾಗಿ ಒಂದೇ ರೀತಿಯಲ್ಲಿ ಎಲ್ಲಾ ಕಡೆಯೂ ಹಂಚಿಕೆಯಾಗುತ್ತಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಾನಾ ರೀತಿ ಎಂದರೆ ಹೇಗೆ?

ಶ್ರೀ ಎಂ. ಸಿ. ವೆಂಕಟೇಶ್ವರವರು.—ಒಂದೊಂದು ಕಡೆ ಒಂದೊಂದು ತರಹ ಇರುವುದರಿಂದ ಕಂಟ್ರಾಕ್ಟರುಗಳಿಗೆ ಅರ್ಧ ಲಾಭವಿದೆ. ಹೀಗೆ ಸರಿಯಾಗಿ ಹಂಚಿಕೆಯಾಗುತ್ತಿಲ್ಲ. ಕೊಡುವ 300 ರೂಪಾಯಿಗಳೂ ನಿಜವಾಗಿಯೂ ಹರಿಜನರ ಕೈಗೆ ಸಿಕ್ಕುತ್ತಿಲ್ಲ. ನಾನಾ ರೀತಿಯಲ್ಲಿ ಹಂಚಿಕೆಯಾಗುತ್ತಿದೆ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—300 ರೂಪಾಯಿಗಳನ್ನು ನಗದಾಗಿ ಕೊಡುತ್ತಿಲ್ಲ. ಹೆಂಚು, ಮರ ಇವುಗಳ ರೂಪವಾಗಿ ಕೊಡುತ್ತಿದ್ದಾರೆ.

ಶ್ರೀ ಎಂ. ಸಿ. ವೆಂಕಟೇಶ್ವರವರು.—300 ರೂಪಾಯಿಗಳನ್ನು ಸಾಮಾನಿನ ರೂಪದಲ್ಲೇ ಆಗಲಿ, ಯಾವ ರೂಪದಲ್ಲೇ ಆಗಲಿ ಕೊಟ್ಟರೂ ದೇಶಾದ್ಯಂತ ಒಂದೇ ವಿಧಾನವಿಲ್ಲ ಎಂಬುದೇ ನನ್ನ ಅಭಿಪ್ರಾಯ. ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಪದ್ಧತಿ ಆಚರಣೆಯಲ್ಲಿದೆ.

ಇನ್ನು ಜನವರಿ 26ರರಿಂದ ಬಹಳ ಹಿಂದೆ ಎಂದೂ ನೋಡದೇಯಿರುವ ಕ್ರಾಂತಿ, ಬದಲಾವಣೆ ಹೆಚ್ಚುತ್ತಿದೆ; ಹಕ್ಕುಬಾಧ್ಯತೆಗಳಲ್ಲಿ ವ್ಯತ್ಯಾಸವಾಗುತ್ತಿದೆ. ಆದರಲ್ಲಿ ನ್ಯೂನತೆಗಳಿವೆ, ಆದ್ದರಿಂದ ಸರ್ಕಾರದವರೂ, ಅನುಭವಸ್ಥರೂ ರಾಷ್ಟ್ರೀಯ ಮನೋಭಾವನೆಯಿಂದ, ವಿಶಾಲ ದೃಷ್ಟಿಯಿಂದ ಇದನ್ನು ಪರಿಶೀಲಿಸಬೇಕಾಗಿದೆ. ಕೆಲವು ಕಡೆಗಳಲ್ಲಿ ಈಗಾಗಲೇ ಸೋಷಿಯಲ್ ಬಾಯ್ಕಾಟ್ ಎಂದು ಹರಿಜನರಿಗೆ ಬಹಳ ವಿಚಿತ್ರ ಹಿಂಸೆಯಾಗುತ್ತಿದೆ, ಉದಾಹರಣೆಗೆ ಫ್ರೆಂಚ್‌ರಾಕ್ಸ್ ತಾಲ್ಲೂಕು ಚಿಕ್ಕೋಡೆಯಲ್ಲಿ ಹರಿಜನರನ್ನು ಯಾವುದಕ್ಕೂ ಸೇರಿಸದೆ ಇತರರು ಸೋಷಿಯಲ್ ಬಾಯ್‌ಕಾಟ್ ಮಾಡಿ ತೊಂದರೆಪಡಿಸುತ್ತಿದ್ದಾರೆ. ಈ ವಿಚಾರವನ್ನು ಅಮಲ್ದಾರರು, ಡೆಪ್ಯುಟಿ ಕಮಿಷನರು ಮುಂತಾದ ಅಧಿಕಾರಿಗಳಿಗೆ ತಿಳಿಸಲು, ಹತ್ತಿಪ್ಪತ್ತು ಮನೆಗಳಿಗಾಗಿ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಮಾನವನು ಹೆದ್ದಾರಿಯಲ್ಲಿ ನಡೆಯಬೇಕೆಂದೂ, ಹಿಂದಿನ ವ್ಯಕ್ತಿಗಳನ್ನೂ ಮಾಮೂಲು ಪದ್ಧತಿಗಳನ್ನೂ ಬಿಟ್ಟು ನಡೆಯಬೇಕೆಂದೂ ಪ್ರಯತ್ನಪಟ್ಟಾಗ ಮಾಮೂಲಿನಿಂದ ಮಾಡುವುದನ್ನು ಮಾತಲೇಬೇಕು ಎಂದು ತೊಂದರೆ ಕೊಡುತ್ತಾರೆ. ಆಫೀಸರುಗಳು ಇದಕ್ಕೆ ನಿಗಾ ಕೊಡುವುದಿಲ್ಲ. ಅಂಥವರನ್ನು ಅಲ್ಲಿಡಬಾರದು. ಸಮಾಜದಲ್ಲಿ ಕ್ರಾಂತಿಯುತವಾದ ಬದಲಾವಣೆಯಾಗುವಾಗ ಇಂಥ ಕಡೆಗಳಲ್ಲಿ ರಾಷ್ಟ್ರೀಯ ದೃಷ್ಟಿಯಿಂದ ಕೆಲಸವನ್ನು ನಿರ್ವಹಿಸಬಲ್ಲ ಅಧಿಕಾರಿಗಳನ್ನೇ ನೇಮಿಸಬೇಕು. ಬಾಕಿಯವರನ್ನು ಬೇರೆ ಕಡೆಗೆ ವರ್ಗಾಯಿಸಬೇಕು.

ಸರ್ಕಾರದವರು ಒಂದು ಕಾನೂನು ಮಾಡಿ ಅದರಿಂದ ನಿಮ್ಮ ಪಂಗಡದವರ ಅಭಿವೃದ್ಧಿಯಾಗುತ್ತದೆಂದು ತೃಪ್ತಿಪಟ್ಟುಕೊಂಡರೆ ಪ್ರಯೋಜನವಿಲ್ಲ. ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬೇಕು. ಇದನ್ನು ಅವರು ಸಹಾನುಭೂತಿಯಿಂದ ನೋಡಬೇಕು.

ಪ್ರಾಣಿವಧೆಯ ವಿಷಯದಲ್ಲಿ ಒಂದು ಕಾನೂನು ಮಾಡಿದ್ದಾರೆ. ಆದರೆ ದೇಶದ ಹೊರಗಿನಿಂದ ಇಲ್ಲಿಗೆ ಮಾಂಸ ಬರುತ್ತಿದೆ. ಇದನ್ನು ನಿಲ್ಲಿಸಬೇಕು. ದೇವಸ್ಥಾನ ಪ್ರವೇಶದ ವಿಷಯ ಹೋದಸಾರಿ ಅಸೆಂಬ್ಲಿಯಲ್ಲಿ ಬಂದಿದ್ದಾಗ ಜೈನ ಸಹೋದರರು ಕೆಲವು ಮುಖಂಡರು ಸೇರಿ ಒಂದು ನಿರ್ಣಯ ಮಾಡಿ ಕಳುಹಿಸಿಕೊಟ್ಟಿದ್ದರು. ಈ ವಿಷಯದಲ್ಲಿ ನನ್ನ ಅಭಿಪ್ರಾಯವೇನೆಂದರೆ, ಜೈನ ಸಹೋದರರು ನೂರಾರು ವರ್ಷಗಳಿಂದ ನಮ್ಮೊಡನಿದ್ದಾರೆ. ಪರಕೀಯರು ರಾಜ್ಯಭಾರ ಮಾಡುತ್ತಿದ್ದಾಗಲೂ ಕೂಡ ಇವರು ನಮ್ಮೊಡನೆ ಸೇರಿದ್ದರೇ ವಿನಾ ತಾವೇ ಬೇರೆ ಜನಾಂಗದವರೆಂದು ಭಾವಿಸಿರಲಿಲ್ಲ. ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರು—ಇವರನ್ನು ಮಾತ್ರ ಹಿಂದೂ ಪಂಗಡದಿಂದ ಬೇರೆ ಮಾಡುತ್ತಿದ್ದರು. ಜೈನರು ಹಿಂದೂ ಸಂಸ್ಕೃತಿ ಮತ್ತು ಆಚಾರಗಳನ್ನು ಅನುಸರಿಸುತ್ತಿರುವುದಾಗಿ ಹೇಳುತ್ತಿದ್ದರು, ಆದರೆ ಈ ಕಾನೂನು, ಎಂದರೆ ದೇವಸ್ಥಾನ ಪ್ರವೇಶ ಕಾನೂನು ಬಂದಮೇಲೆ ತಾವು ಹಿಂದೂಗಳಲ್ಲ, ಬೇರೆ ಎಂದು ಹೇಳುತ್ತಿದ್ದಾರೆ. ಇದಕ್ಕೆ ಒಪ್ಪುವುದಾದರೆ ಸರ್ಕಾರದವರು ಪ್ರಾಣಿವಧ ನಿಷೇಧ ಕಾನೂನು ಮಾಡಿದ್ದಾರೆ, ಇದಕ್ಕೆ ಮುಸ್ಲಿಮರೂ ಕ್ರಿಶ್ಚಿಯನ್ನರೂ ತಾವೂ ಒಪ್ಪುವುದಿಲ್ಲ, ಆದರಿಂದ ಇದನ್ನು ತೆಗೆದುಹಾಕಬೇಕು ಎಂದು ಹೇಳಿದರೆ ಏನು ಮಾಡುವುದು? ಹೀಗೆ ಸರ್ಕಾರದವರು ಸಮಾಜದ ಹಿತಕ್ಕೆ ಮಾಡಿರುವ ಕಾನೂನಿಗೆ ಕಟ್ಟು ಬೀಳದಿದ್ದರೆ ದೇಶದಲ್ಲಿ ಗೊಂದಲಗಳಿಗೆ ಕಾರಣವಾಗಬಹುದು, ಬೇರೆ ಬೇರೆಯವರು ಹೇಳಿದುದನ್ನೆಲ್ಲಾ ಸರ್ಕಾರದವರು ಒಪ್ಪುತ್ತಾ ಹೋದರೆ ಹೇಗೆ?

ಅಧ್ಯಕ್ಷರು.—ಜೈನರು ಹೇಳಿದುದನ್ನು ಸರ್ಕಾರದವರು ಒಪ್ಪಲಿಲ್ಲವಲ್ಲಾ.

ಶ್ರೀ ಎಂ. ಸಿ. ವೆಂಕಟೇಶ್ವರವರು.—ಆದರೆ ಸರ್ಕಾರದವರು ಏನು ಉತ್ತರ ಕೊಟ್ಟರು? ಹರಿಜನರೂ ಹಿಂದೂಗಳು, ಹಿಂದೂ ಧರ್ಮಕ್ಕೇ ಸೇರಿದವರು, ಹೀಗಿರುವಾಗ ಹಿಂದೂಗಳೇ ದೇವಸ್ಥಾನಕ್ಕೆ ಹರಿಜನರನ್ನು ಸೇರಿಸುವುದಿಲ್ಲವೆಂದರೆ ಅದಕ್ಕೆ ಹೇಳುವುದೇನು? ಇದರಿಂದ ಹೇಗೆ ಹಿಂದೂ ಧರ್ಮಕ್ಕೆ ಕಳಂಕ ಬರುತ್ತದೆ? ಇದನ್ನು ತಾವು ಆಲೋಚನೆ ಮಾಡುತ್ತೀರೆಂದು ನಂಬಿದ್ದೇನೆ.

ನಮ್ಮ ಪಂಗಡಕ್ಕೆ ಸೇರಿದ ಲಾ ಕಾಲೇಜು ವಿದ್ಯಾರ್ಥಿಗಳಿಗೆ ಯಾವ ಸೌಕರ್ಯವನ್ನೂ ಸರ್ಕಾರದವರು ಕೊಟ್ಟಿಲ್ಲ. ಮದರಾಸಿನಲ್ಲಿ ಹೆಚ್ಚು ವಿದ್ಯಾರ್ಥಿ ವೇತನಗಳನ್ನು ಕೊಡುತ್ತಿದ್ದಾರೆ. ಆದರೆ ನಮ್ಮಲ್ಲಿ ಕೊಡುತ್ತಿಲ್ಲ, ಆದಕಾರಣ ಇದನ್ನು ಯೋಚಿಸಿ ಹೆಚ್ಚಿನ ವೇತನ ದೊರೆಯುವಂತೆ ಏರ್ಪಾಡು ಮಾಡಬೇಕು.

ಅಧ್ಯಕ್ಷರು.—ಶನಿವಾರದ ದಿವಸಗಳಲ್ಲಿ ಸಾಮಾನ್ಯವಾಗಿ ಕಚೇರಿಗಳು ಬೆಳಿಗ್ಗೆ ನಡೆಯುತ್ತವೆ, ಸೆಕ್ರೆಟೇರಿಯಟ್ ಕಚೇರಿ ಕೂಡ ನಾಳೆ ಬೆಳಿಗ್ಗೆ ನಡೆಯುತ್ತದೆ. ಆದಕಾರಣ ಸಭೆಯನ್ನೂ ನಾಳೆ ಬೆಳಿಗ್ಗೆಯೇ ನಡೆಸುವುದು ಅನುಕೂಲವೆಂದು ಆ ರೀತಿ ಮಾಡಿದೆ.

Sri H. SIDDAVEERAPPA (Chitaldurg District—General).—Before the House is adjourned to day, I would like to make a suggestion for the kind consideration of the Chair.

ಈಗಿನ ಕಾರ್ಯ ಕ್ರಮದ ಪ್ರಕಾರ ಬಹುಶಃ ನಾಳೆ ಬಡ್ಜೆಟ್ ಮೇಲಿನ ಸಾಮಾನ್ಯ ಚರ್ಚೆ ಪೂರೈಸುತ್ತದೆ. ಮಂತ್ರಿಗಳು ಉತ್ತರ ಕೊಡಲು ಕಾಲ ಬೇಕಾಗಬಹುದು. ಇದುವರೆಗೆ ಈ ಬಡ್ಜೆಟ್ ವಿಚಾರದಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಇನ್ನೂ ಅನೇಕ ಸದಸ್ಯರಿಗೆ ಅವಕಾಶ ಸಿಕ್ಕಿಲ್ಲ. ಆದಕಾರಣ ಸಾಧ್ಯವಾದರೆ ಸೋಮವಾರ ಅಥವಾ ಸಭೆ ಒಪ್ಪುವುದಾದರೆ ಭಾನುವಾರ ಈ ಚರ್ಚೆಗೆ ಅವಕಾಶ ಕೊಡುವುದು ಸೂಕ್ತವೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಸೋಮವಾರದಿಂದ ಬೆಳಿಗ್ಗೆ 8½ ಗಂಟೆಗೆ ಸಭೆಯನ್ನು ಪ್ರಾರಂಭಮಾಡಬೇಕೆಂದು ಸಲಹೆ ಮಾಡಿದ್ದಾರೆ, ನೋಡೋಣ. ಮೊದಲನೆಯ ದಿನ ಮಾತನಾಡಲು ಅವಕಾಶವಿದ್ದರೂ ಅನೇಕರು ಆ ಅವ

ಕಾಶವನ್ನು ಉಪಯೋಗಿಸಿಕೊಳ್ಳಲಿಲ್ಲ. ಆಮೇಲೆ ಯೋಚನೆಮಾಡೋಣ. ನಾಳೆ ಬೆಳಗ್ಗೆ 8½ ಯಿಂದ ಒಂದು ಗಂಟೆಯವರೆಗೆ ಸಭೆ ನಡೆಯುತ್ತದೆ.

The Assembly adjourned at Ten Minutes past Six of the Clock to meet at Thirty Minutes past Eight of the Clock the next day, Saturday, 25th March 1950.